ಕರ್ನಾಟಕ ಸರ್ಕಾರ

NCERT

ಗಣಿತ ಮೇಳ

ಗಣಿತ ಪಠ್ಯಪುಸ್ತಕ

ಭಾಗ–2

ಕನ್ನಡ ಮಾಧ್ಯಮ

3

ಮೂರನೇ ತರಗತಿ

ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಸಂಸ್ಥೆ
ಶ್ರೀ ಅರಬಿಂದೋ ಮಾರ್ಗ ನವದೆಹಲಿ 110016

ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 003


ಪರಿವಿಡಿ

ಅಧ್ಯಾಯ 8: ನ್ಯಾಯಯುತ ಹಂಚಿಕೆ	01
ಅಧ್ಯಾಯ 9: ನೂರರ ಮನೆ - II	12
ಅಧ್ಯಾಯ 10: ತರಗತಿಯ ಪಾರ್ಟಿಯಲ್ಲಿ ಮೋಜು	27
ಅಧ್ಯಾಯ 11: ಭರ್ತಿ ಮಾಡುವುದು ಮತ್ತು ಎತ್ತುವುದು	37
ಅಧ್ಯಾಯ 12: ಕೊಡಿ ಮತ್ತು ಪಡೆಯಿರಿ	49
ಅಧ್ಯಾಯ 13: ಸಮಯ ಸಾಗುತ್ತದೆ	65
ಅಧ್ಯಾಯ 14: ಸೂರಜ್‌ಕುಂಡ್ ಜಾತ್ರೆ	80





8 ನ್ಯಾಯಯುತ ಹಂಚಿಕೆ

F2A6P9




ಶಬನಮ್ ಮತ್ತು ಮುಕ್ತ ತಮ್ಮ ಊಟದ ವಿರಾಮವನ್ನು ಆನಂದಿಸುತ್ತಿದ್ದಾರೆ.





ಅವರು ಚಾಕಲೇಟ್ ಮತ್ತು ಪರೋಟವನ್ನು ಸಮನಾಗಿ ಹಂಚಿಕೊಳ್ಳುವರೆಂದು ನೀವು ಹೇಗೆ ಯೋಚಿಸುವಿರಿ?




ಎರಡು ಭಾಗಗಳು ಸಮವಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ಪರೀಕ್ಷಿಸಲು ನೀವು ಬಳಸಬೇಕಾದ ತಂತ್ರದ ಬಗ್ಗೆ ಯೋಚಿಸಿ.




ನಾವು ಚರ್ಚಿಸೋಣ


1. ವಸ್ತುಗಳನ್ನು ನೀವು ಹೇಗೆ ಸಮವಾಗಿ ಹಂಚಿಕೊಳ್ಳುವಿರಿ?
2. ಶಬನಮ್ ಪರೋಟವನ್ನು ಅದರ ಮೇಲೆಯೇ ಮಡಚುತ್ತಿರುವುದೇಕೆ?




ಇದು ಒಂದು ಪೂರ್ಣ ಪರೋಟ.



ಸಮವಾಗಿ ಕತ್ತರಿಸಲಾದ ಪರೋಟಕ್ಕೆ ✓ ಗುರುತು ಹಾಕಿ.











ನಾವು ಮಾಡೋಣ

1. ಒಂದು ಪೂರ್ಣ ಭಾಗದ ಅರ್ಧಕ್ಕೆ ಬಣ್ಣ ಹಚ್ಚಿರುವ ಆಕೃತಿಗಳಿಗೆ ವೃತ್ತ ಹಾಕಿ.




2. ಒಂದು ಪೂರ್ಣದ ಅರ್ಧವನ್ನು ತೋರಿಸಲು ಒಂದು ಗೆರೆ ಎಳೆಯಿರಿ.







3. ಶಬನಮ್ 3 ಅಂಚುಗಳಿಂದ ಸ್ವಲ್ಪ ಚಿಕ್ಕಿಯನ್ನು ತಿಂದಿದ್ದಾಳೆ. ಎಷ್ಟು ಚಿಕ್ಕಿ ಉಳಿದಿದೆ? ✓ ಗುರುತು ಹಾಕಿ.


a) ಅರ್ಧಕ್ಕಿಂತ ಕಡಿಮೆ (b) ಅರ್ಧಕ್ಕಿಂತ ಹೆಚ್ಚು (c) ಅರ್ಧ




4. ಎರಡು ಬದಿಗಳಿಂದ ಅರ್ಧ ಚಿಕ್ಕಿ ತಿಂದಿರುವುದನ್ನು ಬಣ್ಣ ಹಚ್ಚುವುದರ ಮೂಲಕ ತೋರಿಸಿ.



5. ಒಂದು ಅರ್ಧವನ್ನು ಮಾಡುವ ವಿಭಿನ್ನ ವಿಧಾನಗಳನ್ನು ತೋರಿಸಲು ಗೆರೆಗಳನ್ನು ಎಳೆಯಿರಿ.




6. ಇನ್ನೊಂದು ಅರ್ಧವನ್ನು ರಚಿಸಿ, ಚಿತ್ರವನ್ನು ಪೂರ್ಣಗೊಳಿಸಿ.



ನಾವು ಚರ್ಚಿಸೋಣ

ಒಂದು ಆಯತಾಕಾರದ ಹಾಳೆಯನ್ನು ತೆಗೆದುಕೊಂಡು ಅರ್ಧಕ್ಕೆ ಮಡಚಿ. ಅದನ್ನು ಅರ್ಧ ಮಾಡುವ ಎಲ್ಲಾ ವಿಧಾನಗಳನ್ನು ಕಂಡುಹಿಡಿಯಿರಿ.



ಚೌಕಾಕಾರದ ಹಾಳೆಯನ್ನು ತೆಗೆದುಕೊಂಡು ಅದನ್ನು ಅದರ ಅರ್ಧಕ್ಕೆ ಮಡಚಿ. ಅದನ್ನು ಅರ್ಧ ಮಾಡುವ ಎಲ್ಲಾ ವಿಧಾನಗಳನ್ನು ಕಂಡುಹಿಡಿಯಿರಿ.



ನಾವು ಚರ್ಚಿಸೋಣ

ಒಬ್ಬ ಅಜ್ಜನಿಗೆ ಅಮಿತ್ ಮತ್ತು ಬಾಲ ಎಂಬ ಇಬ್ಬರು ಗಂಡು ಮಕ್ಕಳಿದ್ದರು. ಅವರು ಒಂದು ಮಾವಿನ ಮರ, ಒಂದು ಸೌರದೀಪ ಮತ್ತು ಉಣ್ಣೆಯ ಹೊದಿಕೆಯನ್ನು ಮಕ್ಕಳಿಗೆ ನೀಡಿ ಆ ವಸ್ತುಗಳನ್ನು ಅವರೊಳಗೆ ಹಂಚಿಕೊಳ್ಳಲು ತಿಳಿಸಿದರು. ಅಮಿತ್ ಒಬ್ಬ ಕುತಂತ್ರಿ. ಅವನು ಸಹೋದರನಿಗೆ "ನಾವು ವಸ್ತುಗಳನ್ನು ಸಮಾನವಾಗಿ ಹಂಚಿಕೊಳ್ಳೋಣ" ಎಂದು ಹೇಳಿದನು. ನಾನು ಹಣ್ಣುಗಳನ್ನು ಇಟ್ಟುಕೊಳ್ಳುತ್ತೇನೆ. ನೀನು ಮರವನ್ನು ಇಟ್ಟುಕೋ. ನಾನು ರಾತ್ರಿಯಲ್ಲಿ ದೀಪ ಇಟ್ಟುಕೊಳ್ಳುತ್ತೇನೆ. ನೀನು ಅದನ್ನು ಹಗಲಿನಲ್ಲಿ ಇಟ್ಟುಕೋ. ನಾನು ಹೊದಿಕೆಯನ್ನು ಅರ್ಧ ವರ್ಷ ಚಳಿಗಾಲದಲ್ಲಿ ಇಟ್ಟುಕೊಳ್ಳುತ್ತೇನೆ. ನೀನು ಅದನ್ನು ಬೇಸಿಗೆಯಲ್ಲಿ ಅರ್ಧ ವರ್ಷ ಇಟ್ಟುಕೊಳ್ಳಬಹುದು." ಎಂದು ಹೇಳಿದನು. ಬಾಲ ಒಪ್ಪಿದನು.



ಇದು ನ್ಯಾಯಯುತವಾದ ಹಂಚಿಕೆಯ ವಿಧಾನವೇ? ಇದನ್ನು ನ್ಯಾಯಬದ್ಧವಾಗಿ ಹಂಚಲು ಇತರೆ ಯಾವುದಾದರೂ ವಿಧಾನವಿದೆಯೇ?



ನಾವು ಮಾಡೋಣ

ಇಲ್ಲಿ ಕೆಲವು ಮಾವಿನಹಣ್ಣುಗಳಿವೆ. ಇಬ್ಬರು ಮಕ್ಕಳ ನಡುವೆ ಅವುಗಳನ್ನು ಸಮವಾಗಿ ಹಂಚಿ.




ಅರ್ಧ ಮತ್ತು ಎರಡರಷ್ಟು



6ರ ಅರ್ಧ 3. 3ರ ದುಪ್ಪಟ್ಟು 6.

ಮುಂದಿನ ಬಿಟ್ಟ ಸ್ಥಳಗಳಲ್ಲಿ ಎರಡರಷ್ಟು ಅಥವಾ ಅರ್ಧ ಎಂದು ಬರೆಯಿರಿ.






ಶಿಕ್ಷಕರ ಟಿಪ್ಪಣಿ: ವಿವಿಧ ರೀತಿಯಲ್ಲಿ ಕಾಗದವನ್ನು ಮಡಚಿ ಅರ್ಧ ಭಾಗಗಳನ್ನು ತೋರಿಸಲು ವಿದ್ಯಾರ್ಥಿಗಳನ್ನು ಪ್ರೇರೇಪಿಸಿ. ಭಿನ್ನರಾಶಿಯನ್ನು ಒಂದು ಅರ್ಧ ಮತ್ತು 2 ರಲ್ಲಿ 1 ಎಂಬುದಾಗಿ ಅಲ್ಲ.

4 ಗೋಲಿಗಳು 8 ಗೋಲಿಗಳ_____

8 ಗೋಲಿಗಳು 4 ಗೋಲಿಗಳ _____

10 ಗೋಲಿಗಳು 5 ಗೋಲಿಗಳ_____

5 ಗೋಲಿಗಳು 10 ಗೋಲಿಗಳ _____



6 ಗೋಲಿಗಳು, 12 ಗೋಲಿಗಳ _____

12 ಗೋಲಿಗಳು, 6 ಗೋಲಿಗಳ _____

ಸಂಖ್ಯಾರೇಖೆಯಲ್ಲಿ 13, 7ರ ಎರಡರಷ್ಟಕ್ಕಿಂತ ಎಷ್ಟು ದೂರದಲ್ಲಿದೆ?

14 ರ ಅರ್ಧದಿಂದ 5 ಎಷ್ಟು ದೂರದಲ್ಲಿದೆ?



ನಾನು ಯಾರು? ಊಹಿಸಿ.

ಸರಿಯಾದ ಭಿನ್ನರಾಶಿಯನ್ನು ಕಂಡುಹಿಡಿಯಲು ಸುಳುಹುಗಳನ್ನು ಉಪಯೋಗಿಸಿ.

ಕೊಟ್ಟಿರುವ 3 ಆಯ್ಕೆಗಳಿಂದ ಸರಿಯಾದ ಬಾಕ್ಸ್‌ಗೆ ✓ ಗುರುತು ಹಾಕಿ.


1. ನನ್ನ ಬಳಿ 3 ರ ಎರಡರಷ್ಟಕ್ಕಿಂತ ಕಡಿಮೆ ಗೋಲಿಗಳಿವೆ.
   ನನ್ನ ಬಳಿ 8 ರ ಅರ್ಧಕ್ಕಿಂತ ಹೆಚ್ಚು ಗೋಲಿಗಳಿವೆ.

a)  4 ಗೋಲಿಗಳು

b)  5 ಗೋಲಿಗಳು

c)  6 ಗೋಲಿಗಳು


2. ನನ್ನ ಬಳಿ 4 ರ ಎರಡರಷ್ಟಕ್ಕಿಂತ ಕಡಿಮೆ ಗೋಲಿಗಳು ಇವೆ.
   ನನ್ನ ಬಳಿ 10 ರ ಅರ್ಧಕ್ಕಿಂತ ಹೆಚ್ಚು ಗೋಲಿಗಳಿವೆ.

a)  8 ಗೋಲಿಗಳು

b)  6 ಗೋಲಿಗಳು

c)  3 ಗೋಲಿಗಳು





ಪ್ರತಿಯೊಬ್ಬರೂ ಚಿಕ್ಕಿಯ ಯಾವ ಭಾಗವನ್ನು ಪಡೆದರು?

ಪೂರ್ಣದಲ್ಲಿ ಎಷ್ಟು ಚತುರ್ಥಾಂಶ (ಕಾಲುಭಾಗ) ಗಳಿವೆ?




ಶಿಕ್ಷಕರ ಟಿಪ್ಪಣಿ: ವಿದ್ಯಾರ್ಥಿಗಳು 4ನೇ ಒಂದು ಅಥವಾ ಅರ್ಧದ ಅರ್ಧ ಎಂದೂ ಹೇಳಬಹುದು. ವ್ಯಕ್ತಪಡಿಸುವ ವಿವಿಧ ವಿಧಾನಗಳು ಮತ್ತು ನಿಖರವಾದ ಹೇಳಿಕೆಗಳನ್ನು ಹೇಳಲು ಸಹಾಯ ಮಾಡುವುದು.




ನಾವು ಮಾಡೋಣ

1. ಕಾಲುಭಾಗಗಳನ್ನು ತೋರಿಸುವ ಚಿತ್ರಗಳಿಗೆ ✓ ಗುರುತು ಹಾಕಿ.




2. ಒಂದು ಪೂರ್ಣವನ್ನು ಕಾಲುಭಾಗ ಮಾಡಲು ಗೆರೆಗಳನ್ನು ಎಳೆಯಿರಿ.





3. ಉಳಿದ ಮೂರು ಕಾಲುಭಾಗಗಳನ್ನು ರಚಿಸಿ ಪೂರ್ಣವಾಗಿಸಿ.

(a) 

(b) 

4. ಉಳಿದ ಕಾಲುಭಾಗಗಳನ್ನು ರಚಿಸಿ ಪೂರ್ಣವಾಗಿಸಿ.

(a) 


(b) 



ಶಿಕ್ಷಕರ ಟಿಪ್ಪಣಿ: ಒಂದು ಪೂರ್ಣವನ್ನು ನಾಲ್ಕು ಸಮಾನ ಭಾಗಗಳಾಗಿ ವಿಭಜಿಸುವುದರಿಂದ ಹೇಗೆ ಕಾಲು ಭಾಗದ ತುಣುಕುಗಳಾಗುತ್ತವೆ ಎಂಬುದನ್ನು ಚರ್ಚಿಸಿ. ಕಾಗದ ಮಡಚುವಿಕೆಯ ವಿವಿಧ ವಿಧಾನಗಳಲ್ಲಿ ಕಾಲು ಭಾಗವನ್ನು ತೋರಿಸಲು ಪ್ರೋತ್ಸಾಹಿಸಿ. ವಿದ್ಯಾರ್ಥಿಗಳು ವಾಸ್ತವವಾಗಿ ಮಡಚಿದ್ದು ಅವರ ಕಾಗದದ ಕಾಲುಭಾಗ ಎಂದು ನಿಮಗೆ ಮನವರಿಕೆ ಮಾಡಲಿ. ಭಿನ್ನರಾಶಿಯನ್ನು 4 ರಲ್ಲಿ 1 ಅಲ್ಲ ಕಾಲು ಭಾಗ ಎಂದು ಉಲ್ಲೇಖಿಸಿ.

ಅರ್ಧವೇ ಅಥವಾ ಕಾಲುಭಾಗವೇ?

ಮುಂದಿನ ಬಿಟ್ಟ ಸ್ಥಳಗಳನ್ನು ತುಂಬಲು ಸೂಕ್ತವಾದ ಪದಗಳಿಗೆ ✓ ಗುರುತು ಹಾಕಿ.





ಶಬನಮ್  ಹಕ್ಕಿಗಳ ಸಂಖ್ಯೆಯ ಅರ್ಧ / ಕಾಲು ಭಾಗಕ್ಕೆ ಬಣ್ಣ ಹಚ್ಚಿದಳು.

ಮುಕ್ತ  ಹಕ್ಕಿಗಳ ಸಂಖ್ಯೆಯ ಅರ್ಧ / ಕಾಲು ಭಾಗಕ್ಕೆ ಬಣ್ಣ ಹಚ್ಚಿದಳು.

ಮುಕ್ತ ಬಣ್ಣ ಹಚ್ಚಿದ ಅರ್ಧದಷ್ಟು / ಎರಡರಷ್ಟು ಹಕ್ಕಿಗಳಿಗೆ ಶಬನಮ್ ಬಣ್ಣ ಹಚ್ಚಿದಳು.

ಲಕ್ಷಣ್ಯ ಮತ್ತು ಪೀಹು ಬಳಿ ತಲಾ 16 ಹೂಗಳಿವೆ.






ಲಕ್ಷಣ್ಯ  ಅವಳ ಹೂಗಳ ಅರ್ಧದಷ್ಟು/ಕಾಲುಭಾಗದಷ್ಟು ಕಟ್ಟಿದಳು.


ಪೀಹು  ಅವಳ ಹೂಗಳ ಅರ್ಧದಷ್ಟು/ಕಾಲುಭಾಗದಷ್ಟು ಕಟ್ಟಿದಳು.

ಲಕ್ಷಣ್ಯ  ಪೀಹು ಕಟ್ಟಿದ ಹೂಗಳಿಗಿಂತ ಅರ್ಧದಷ್ಟು/ ಎರಡರಷ್ಟು ಕಟ್ಟಿದಳು.


ಕಾಲುಭಾಗಗಳು ಮತ್ತು ಪೂರ್ಣ




1 ಕಾಲುಭಾಗ



2 ಕಾಲುಭಾಗಗಳು (ಅರ್ಧ)



3 ಕಾಲುಭಾಗಗಳು




4 ಕಾಲುಭಾಗಗಳು ಒಂದು ಪೂರ್ಣವಾಗುತ್ತದೆ




ನಾವು ಮಾಡೋಣ


1. ಮೂರು ಚತುರ್ಥಾಂಶ(ಕಾಲುಭಾಗ)ಗಳನ್ನು ತೋರಿಸುವ ಆಕೃತಿಗಳಿಗೆ ✓ ಹಾಕಿ.




2. ಮುಂದಿನ ಆಕೃತಿಗಳನ್ನು ಸೂಚಿಸಿದ ಭಿನ್ನರಾಶಿಗಳಾಗಿ ತೋರಿಸಲು ಬಣ್ಣ ಹಚ್ಚಿ.




2 ಕಾಲುಭಾಗಗಳು



1 ಕಾಲುಭಾಗ




3 ಕಾಲುಭಾಗಗಳು



4 ಕಾಲುಭಾಗಗಳು




3 ಕಾಲುಭಾಗಗಳು




1 ಕಾಲುಭಾಗ


3. ಮುಂದಿನ ಆಕೃತಿಗಳನ್ನು ಸೂಚಿಸಿದ ಭಿನ್ನರಾಶಿಗಳಾಗಿ ತೋರಿಸಲು ಗೆರೆ ಹಾಕಿ ಬಣ್ಣ ಹಚ್ಚಿ.




2 ಕಾಲುಭಾಗಗಳು




1 ಕಾಲುಭಾಗ




3 ಕಾಲುಭಾಗಗಳು



4 ಕಾಲುಭಾಗಗಳು




3 ಕಾಲುಭಾಗಗಳು




1 ಕಾಲುಭಾಗ

4. ಇಲ್ಲಿ ಚತುರ್ಥಾಂಶಗಳನ್ನು ತೋರಿಸುವ ಒಂದು ಆಯತವಿದೆ. ಹೇಗೆ? ಚರ್ಚಿಸಿ.



5. ಮುಂದೆ ನೀಡಿರುವ ಗ್ರಿಡ್‌ನಲ್ಲಿ ಕಾಲುಭಾಗಗಳು ಮತ್ತು ಅರ್ಧಗಳನ್ನು ವಿಭಿನ್ನ ವಿಧಾನಗಳಲ್ಲಿ ತೋರಿಸಿ.



6. ಒಂದು ಪೂರ್ಣ ಭಾಗವನ್ನು ಮಾಡಲು ನಿಮ್ಮ ಪುಸ್ತಕದಲ್ಲಿರುವ ಭಿನ್ನರಾಶಿ ಕಾರ್ಡ್‌ಗಳನ್ನು ಉಪಯೋಗಿಸಿ.




ಶಿಕ್ಷಕರ ಟಿಪ್ಪಣಿ: ಮಕ್ಕಳು ಒಗಟು ಮಾಡಲು ಹಿಂಭಾಗದಲ್ಲಿ ನೀಡಲಾದ ರಂಧ್ರವಿರುವ ಹಾಳೆಯ ಆಕಾರಗಳನ್ನು ಬಳಸಲಿ. ಒಂದು ಪೂರ್ಣವನ್ನು ಮಾಡಲು ಎಷ್ಟು ತುಣುಕುಗಳನ್ನು ಬಳಸಿದ್ದೀರಿ? ಅವು ಒಂದೇ ಆಗಿದೆಯೇ ಎಂದು ನೋಡಲು ತುಣುಕುಗಳನ್ನು ಒಂದರ ಮೇಲೊಂದು ಇಡಿ.

9 ನೂರರ ಮನೆ – II

P1B4I2



ಒಂದು ದಿನ ಅಕ್ಬರ್ ಮತ್ತು ಬೀರಬಲ್ ತೋಟದಲ್ಲಿ ನಡೆದುಕೊಂಡು ಹೋಗುತ್ತಿದ್ದರು. ಅವರ ಸುತ್ತಲೂ ಅನೇಕ ಕಾಗೆಗಳು ಆಕಾಶದಲ್ಲಿ ಹಾರಾಡುತ್ತಿದ್ದವು. ಅಲ್ಲಿ ಎಷ್ಟು ಕಾಗೆಗಳಿವೆ ಎಂದು ತಿಳಿಯುವ ಕುತೂಹಲ ಅಕ್ಬರ್‌ಗೆ ಇತ್ತು. ಇದನ್ನು ಕಂಡುಹಿಡಿದವರಿಗೆ ಅವನು ಬಹುಮಾನವನ್ನು ಘೋಷಿಸಿದನು. ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹಾರುತ್ತಲೇ ಇರುವ ಕಾಗೆಗಳನ್ನು ಎಣಿಸುವುದು ಹೇಗೆ ಎಂದು ಜನ ಆಶ್ಚರ್ಯಪಡುತ್ತಿದ್ದರು ಇದನ್ನು ನೀನು ಕಂಡುಹಿಡಿಯಲು ಸಾಧ್ಯವೇ ಎಂದು ಅಕ್ಬರ್ ಬೀರಬಲ್‌ಗೆ ಕೇಳಿದನು.



ಒಂದು ದಿನ ಯೋಚಿಸಿದ ನಂತರ,"ನಮ್ಮ ನಗರದಲ್ಲಿ ನಿಖರವಾಗಿ ಒಂಬೈನೂರ ಅರವತ್ತಮೂರು ಕಾಗೆಗಳಿವೆ" ಎಂದು ಬೀರಬಲ್ ಹೇಳಿದನು.

ಅಕ್ಬರ್ ಆಶ್ಚರ್ಯಚಕಿತನಾಗಿ "ನೀನು ಅಷ್ಟು ಖಚಿತವಾಗಿ ಹೇಗೆ ಹೇಳುತ್ತೀಯ"? ಎಂದು ಬೀರಬಲ್‌ಗೆ ಕೇಳಿದನು.

“ನೀವು ಅವುಗಳನ್ನು ಎಣಿಸಬಹುದು” ಎಂದು ಬೀರಬಲ್ ಹೇಳಿದನು.

“ಕಡಿಮೆ ಇದ್ದರೆ?” ಎಂದು ಅಕ್ಬರ್ ಕೇಳಿದನು.

ಇತರೆ ಕಾಗೆಗಳು ರಜೆಯ ಮೇಲೆ ಹೋಗಿರುತ್ತವೆ” ಎಂದು ಬೀರಬಲ್ ಹೇಳಿದನು.


“ಹೆಚ್ಚಾಗಿದ್ದರೆ?” ಎಂದು ಅಕ್ಬರ್ ಕೇಳಿದನು.

“ಬೇರೆ ಸ್ಥಳಗಳಿಂದ ಕಾಗೆಗಳು ನಗರಕ್ಕೆ ಭೇಟಿ ನೀಡಿರುತ್ತವೆ” ಎಂದು ಬೀರಬಲ್ ಹೇಳಿದನು.

ಬೀರಬಲ್‌ನ ಉತ್ತರದಿಂದ ಅಕ್ಬರ್‌ನಿಗೆ ಸಂತೋಷವಾಯಿತು ಮತ್ತು ಅವನಿಗೆ ಬಹುಮಾನವನ್ನು ನೀಡಿದನು.



ನಾವು ಮಾಡೋಣ



ಅಕ್ಕಿ ಚೀಲಗಳ ಸಂಖ್ಯೆ

ಮುಂದಿನ ಸಂಖ್ಯೆಗಳನ್ನು ತೋರಿಸಲು ಡ್ರೈವರ್‌ನಂತೆ ಟೈಲ್ಸ್ ರಚಿಸಿ. ಇದನ್ನು ನೀವು ನಿಮ್ಮ ನೋಟ್ ಪುಸ್ತಕದಲ್ಲಿ ಮಾಡಬಹುದು.


a. 832 b. 947

c. 726 d. 504

e. 620 f. 700


ಮುಂದೆ ನೀಡಿರುವ ಸಂಖ್ಯೆಗಳನ್ನು ಸಂಖ್ಯಾರೇಖೆಯ ಮೇಲೆ ಗುರುತಿಸೋಣ:

530, 540, 628, 696, 590



ಮುಂದೆ ನೀಡಿರುವ ಸಂಖ್ಯೆಗಳನ್ನೂ ಸಂಖ್ಯಾ ರೇಖೆಯ ಮೇಲೆ ಗುರುತಿಸಿ:

703, 721, 759, 810, 855, 887






ಶಿಕ್ಷಕರ ಟಿಪ್ಪಣಿ: ನಿಮ್ಮ ತರಗತಿಯ ಶಾಲೆ ಅಥವಾ ನೆರೆಹೊರೆಯ ವಿದ್ಯಾರ್ಥಿಗಳ ಸಂಖ್ಯೆ ಅಥವಾ ಗಾಡಿಯಲ್ಲಿನ ಬಟಾಣಿಯ ಸಂಖ್ಯೆಯನ್ನು ಊಹಿಸಲು ವಿದ್ಯಾರ್ಥಿಗಳಿಗೆ ಸಹಾಯ ಮಾಡಿ. 1000 ಎಷ್ಟು ದೊಡ್ಡದೆಂದು ತೋರಿಸಲು 1000 ಮಣಿಹಾರವನ್ನು ತೋರಿಸಿ. 500 ನಂತರದ ನೂರುಗಳನ್ನೂ ಈ ಮಣಿಹಾರದಲ್ಲಿ ತೋರಿಸಿ: 600, 700, 800, 900, 1000.

ನಾವು ಯೋಚಿಸೋಣ

1. ಕೊಟ್ಟಿರುವ ಪ್ರತಿ ಸಂಖ್ಯೆಯು ಯಾವ ಸೂಕ್ತ ಸಂಖ್ಯೆಗಳ ನಡುವೆ ಇರುತ್ತದೆ ಬರೆಯಿರಿ.

ಸಂಖ್ಯೆ	ಸಮೀಪದ ನೂರುಗಳು	ಸಮೀಪದ ಐವತ್ತುಗಳು	ಸಮೀಪದ ಹತ್ತುಗಳು
468	400 ಮತ್ತು 500	450 ಮತ್ತು 500	460 ಮತ್ತು 470
183			
345			
693			
734			
899			

2. ಸಂಖ್ಯಾರೇಖೆಯನ್ನು ಬಳಸಿ ಕೊಕ್ಕರೆಗಳು ತಮ್ಮ ಆಹಾರವನ್ನು ತಲುಪಲು ಸಹಾಯ ಮಾಡಿ.



ಹುಳವನ್ನು ತಲುಪಲು


667 – ..... ಹೆಜ್ಜೆಗಳು = 650

ಹೆಜ್ಜೆಗಳ ಉದ್ದ: .....

ಮೀನನ್ನು ತಲುಪಲು

667 + ... ಹೆಜ್ಜೆಗಳು = 700

ಹೆಜ್ಜೆಗಳ ಉದ್ದ: .....





ಶಿಕ್ಷಕರ ಟಿಪ್ಪಣಿ: ಕೊಕ್ಕರೆಯ ಆಹಾರಕ್ಕಾಗಿ ವಿಭಿನ್ನ ಜಿಗಿತಗಳು ಅಥವಾ ಹೆಜ್ಜೆಗಳನ್ನು ಕಂಡುಹಿಡಿಯಲು ಮಕ್ಕಳಿಗೆ ಸಹಾಯ ಮಾಡಿ. ಕೊಕ್ಕರೆ 2 ಅಥವಾ 3 ಜಿಗಿತಗಳಲ್ಲಿ ಹೇಗೆ ತನ್ನ ಆಹಾರವನ್ನು ತಲುಪಬಹುದು ಎಂಬುದನ್ನು ಅವರು ಕಂಡುಹಿಡಿಯಲಿ.

ಹುಳವನ್ನು ತಲುಪಲು

..... – ..... ಹೆಜ್ಜೆಗಳು = 750

ಹೆಜ್ಜೆಗಳ ಉದ್ದ: .....

ಮೀನನ್ನು ತಲುಪಲು

..... + ... ಹೆಜ್ಜೆಗಳು = 800

ಹೆಜ್ಜೆಗಳ ಉದ್ದ: .....

ತಂಬೋಲಾ

3. ಗ್ರಿಡ್‌ನ್ನು 570 ಮತ್ತು 630 ರ ನಡುವಿನ ಸಂಖ್ಯೆಗಳಿಂದ ತುಂಬಿ. ಮುಂದಿನ ಸುಳುಹುಗಳಿಗೆ ಹೊಂದಿಕೆಯಾಗುವ ಎಲ್ಲಾ ಸಂಖ್ಯೆಗಳಿಗೆ 'x' ಗುರುತು ಹಾಕಿ. ನೀವು ಒಂದಕ್ಕಿಂತ ಹೆಚ್ಚು ಸಂಖ್ಯೆಗೆ 'x' ಗುರುತು ಹಾಕಬಹುದು. ಅತೀ ಹೆಚ್ಚು ಸಂಖ್ಯೆಗಳಿಗೆ 'x' ಹಾಕಿದ ಮಗು ವಿಜೇತ. ಒಂದು ಉದಾಹರಣೆಯನ್ನು ಮುಂದೆ ನೀಡಿದೆ.

ಸುಳುಹುಗಳು


1. 597
2. 4 ನ್ನು ಹೊಂದಿರುವ ಸಂಖ್ಯೆ
3. 595 ಮತ್ತು 605 ರ ನಡುವೆ ಇರುವ ಸಂಖ್ಯೆಗಳು
4. ಹತ್ತರ ಸ್ಥಾನದಲ್ಲಿ 1 ನ್ನು ಹೊಂದಿರುವ ಸಂಖ್ಯೆ
5. 610 ಕ್ಕಿಂತ ಎರಡು ಹೆಚ್ಚು
6. 625 ಕ್ಕಿಂತ 5 ಕಡಿಮೆ


572	628	579	~~599~~
~~597~~	~~574~~	581	~~600~~
623	573	570	~~602~~
609	~~616~~	~~614~~	626





ಶಿಕ್ಷಕರ ಟಿಪ್ಪಣಿ: ವಿವಿಧ ಸಂಖ್ಯಾ ವ್ಯಾಪ್ತಿಗಳು, ವಿವಿಧ ಸುಳುಹುಗಳು ಮತ್ತು ವಿವಿಧ ಗ್ರಿಡ್‌ಗಳೊಂದಿಗೆ ತಂಬೋಲಾ ಆಟವನ್ನು ಆಡಿ. ಸಂಖ್ಯಾ ವಾಕ್ಯಗಳಲ್ಲಿ ಪ್ರತಿನಿಧಿಸುವುದಲ್ಲದೆ, ಭೌತಿಕವಾಗಿ ಬೆಂಕಿಕಡ್ಡಿಗಳು, ಬ್ಲಾಕ್‌ಗಳು ಅಥವಾ ಸಂಖ್ಯಾ ರೇಖೆಯ ಮೂಲಕ ಪ್ರತಿನಿಧಿಸುವ ವಿವಿಧ ವಿಧಾನಗಳನ್ನು ಪರಿಷ್ಕರಿಸುವಲ್ಲಿ ಶಿಕ್ಷಕರು ಮಕ್ಕಳಿಗೆ ಸಹಾಯ ಮಾಡಿ.

ಮುಂದಿನ ಸಂಖ್ಯೆಗಳನ್ನು ಮಾಡುವ ವಿವಿಧ ವಿಧಾನಗಳನ್ನು ಬರೆಯಿರಿ.











ಜಿಗಿಯಿರಿ ಮತ್ತು ಬಿಡಿಸಿ

ತೇಜಿ ಮತ್ತು ಜೋಜೋ ವಿಶ್ರಾಂತಿ ಪಡೆಯುತ್ತಿದ್ದಾರೆ. ಸಂಖ್ಯಾ ವಿನ್ಯಾಸಗಳನ್ನು ಪೂರ್ಣಗೊಳಿಸಲು ಅಜ್ಜಿ ಅವರಿಗೆ ಹೇಳುತ್ತಾಳೆ. ಖಾಲಿ ಬಾಕ್ಸ್‌ಗಳನ್ನು ತುಂಬಲು ಅವರಿಗೆ ಸಹಾಯ ಮಾಡೋಣ.









ಶಿಕ್ಷಕರ ಟಿಪ್ಪಣಿ: ಈ ಒಗಟಿನಲ್ಲಿ ನೀಡಲಾದ ಸುಳುಹನ್ನು ಅರ್ಥೈಸಲು ವಿದ್ಯಾರ್ಥಿಗಳಿಗೆ ಸಹಾಯ ಮಾಡಿ.

940 941 942 943 944 945 947 948 949 950 951 952 953 954 955 957 958 959 961 962 963 964 965 966 967 968 969


ನಾವು ಮಾಡೋಣ


1. ಮಧ್ಯದಲ್ಲಿರುವ ಸಂಖ್ಯೆಗಳಿಗೆ ಸಂಖ್ಯಾ ವಾಕ್ಯಗಳನ್ನು ಬರೆಯಿರಿ.






2. ನಿಬಂಧನೆಗಳನ್ನು ಪೂರೈಸುವಂತೆ, ಖಾಲಿ ಜಾಗಗಳಲ್ಲಿ ಸಂಖ್ಯೆಗಳನ್ನು ಬರೆಯಿರಿ.





ಸಂಖ್ಯಾ ಒಗಟುಗಳು

3. ನಿಬಂಧನೆಗಳನ್ನು ಪೂರೈಸುವಂತೆ ಖಾಲಿ ವೃತ್ತಗಳಲ್ಲಿ 384, 23, 176, 905 ಈ ಸಂಖ್ಯೆಗಳನ್ನು ಭರ್ತಿ ಮಾಡಿ.





4. ಎಡಭಾಗದಲ್ಲಿರುವ ಪರಿಮಾಣಗಳನ್ನು ಬಲಭಾಗದಲ್ಲಿರುವ ಸೂಕ್ತ ಸಂಖ್ಯೆಗಳೊಂದಿಗೆ ಹೊಂದಿಸಿ.

ನಿಮ್ಮ ಶಾಲೆಯಲ್ಲಿರುವ ಮಕ್ಕಳ ಸಂಖ್ಯೆ	0-10
ನಿಮ್ಮ ತರಗತಿಯಲ್ಲಿರುವ ಪುಸ್ತಕಗಳ ಸಂಖ್ಯೆ	11-50
ಬಸ್‌ನಲ್ಲಿರುವ ಜನರ ಸಂಖ್ಯೆ	51-100
ನಿಮ್ಮ ಗಣಿತ ಪುಸ್ತಕದಲ್ಲಿರುವ ಪುಟಗಳ ಸಂಖ್ಯೆ	101-200
ಒಂದು ದಿನದಲ್ಲಿ ನೀವು ನಡೆಯುವ ಹೆಜ್ಜೆಗಳ ಸಂಖ್ಯೆ	201-500
ಆಕಾಶದಲ್ಲಿರುವ ನಕ್ಷತ್ರಗಳ ಸಂಖ್ಯೆ	501-1000
ಒಂದು ಹಾರದಲ್ಲಿರುವ ಹೂಗಳ ಸಂಖ್ಯೆ	1000ಕ್ಕಿಂತ ಹೆಚ್ಚು

5. ಎಲ್ಲಾ ನಿಬಂಧನೆಗಳು ಪೂರೈಸಲ್ಪಡುವಂತೆ ಮುಂದಿನವುಗಳನ್ನು ಹೊಂದಿಸಿ.

ನನ್ನ ಬಳಿ ಅಂಕಿಗಳಾಗಿ 2 ಸೊನ್ನೆಗಳಿವೆ. ಮತ್ತು ನಾನು 99 ಕ್ಕೆ ತುಂಬಾ ಹತ್ತಿರವಾಗಿದ್ದೇನೆ.	150
ನನ್ನ ಬಳಿ 3 ನೂರುಗಳು, 6 ಹತ್ತುಗಳು ಮತ್ತು 7 ಬಿಡಿ ಇದೆ.	425
ನನ್ನ ಬಳಿ ಸೊನ್ನೆ ಹತ್ತುಗಳು ಮತ್ತು ಸೊನ್ನೆ ಬಿಡಿ ಇದೆ.	367
ನಾನು ಶತಕ + ಅರ್ಧ ಶತಕ	400
ನಾನು 400 ಮತ್ತು 450 ರ ಮಧ್ಯೆ ಬರುತ್ತೇನೆ ಮತ್ತು ನನ್ನ ಬಳಿ 5 ಒಂದು ಅಂಕಿಯಾಗಿ ಇದೆ.	100



ಶಿಕ್ಷಕರ ಟಿಪ್ಪಣಿ: ಬಲಭಾಗದಲ್ಲಿರುವ ಸಂಖ್ಯಾ ವ್ಯಾಪ್ತಿಗಳು ಎಡಭಾಗದ ಬಹಳ ಪರಿಮಾಣಗಳೊಂದಿಗೆ ಹೊಂದಿಸಬಹುದೆಂಬುದನ್ನು ದಯವಿಟ್ಟು ಗಮನಿಸಿ. ನೀವು ಸಂಖ್ಯಾವ್ಯಾಪ್ತಿಗೆ ಹೊಂದಿಕೆಯಾಗುವ ವಸ್ತುಗಳನ್ನು ಗುರುತಿಸಲು ಸಹ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಬಹುದು.

ಸಂಖ್ಯಾ ಪತ್ತೇದಾರ

ಸಂಖ್ಯೆಗಳು ಮತ್ತು ವಿನ್ಯಾಸಗಳೊಂದಿಗೆ ಪ್ರತಿಯೊಬ್ಬರೂ ಸ್ವಲ್ಪ ಆನಂದಿಸೋಣ!

ನೂರುಗಳನ್ನು ಗಮನಿಸಿ – 100 200 300

ಎಲ್ಲಾ ನೂರುಗಳನ್ನು ನೀವು ಹುಡುಕಬಲ್ಲಿರಾ?

ಕೆಲವು ಸಂಖ್ಯೆಗಳು ವಿಶೇಷವಾಗಿವೆ. ಅವುಗಳನ್ನು ಅನ್ವೇಷಿಸೋಣ. 789 345 ಮತ್ತು 123, ಇನ್ನೂ ಯಾವುವು?

ಅವು ಏಕೆ ಇಷ್ಟೊಂದು ಅಚ್ಚುಕಟ್ಟಾಗಿವೆ ಎಂದು ಜೊಜೋ ಆಶ್ಚರ್ಯಪಡುತ್ತಾನೆ. 876 ಮತ್ತು 321 ಕೂಡ ಅದೇ ರೀತಿಯಾಗಿವೆ ಎಂದು ತೇಜಿ ಹೇಳುತ್ತಾಳೆ.

ಈಗ, 11, 22, 33 ಇವು ಒಂದೇ ಸಂಖ್ಯೆ ಪುನರಾವರ್ತನೆಯಾಗಿರುವ ಸಂಖ್ಯೆಗಳು, ಅವು ಅವಳಿ ಅಂಕಿಗಳನ್ನು ಹೊಂದಿರುತ್ತವೆ. 111, 222, 333 ತ್ರಿವಳಿ ಅಂಕಿಗಳಾಗಿವೆ.



ಶಿಕ್ಷಕರ ಟಿಪ್ಪಣಿ: ಈ ಒಗಟುಗಳನ್ನು ಬಿಡಿಸಲು ವ್ಯವಸ್ಥಿತವಾಗಿ/ಕ್ರಮಬದ್ಧವಾಗಿ ಸಂಖ್ಯೆಗಳನ್ನು ಎಣಿಸಲು ಮತ್ತು ಬರೆಯಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿ. ಇತರರೊಂದಿಗೆ ತಮ್ಮ ತಂತ್ರವನ್ನು ಹಂಚಿಕೊಳ್ಳಲು ಬಿಡಿ.

ಇದೇ ವಿನ್ಯಾಸವನ್ನು ಅನುಸರಿಸುವ ಇನ್ನೂ ಹೆಚ್ಚಿನ ಸಂಖ್ಯೆಗಳನ್ನು ನೀವು ಕಂಡುಹಿಡಿಯಬಲ್ಲಿರಾ?

ಎಡದಿಂದ ಬಲಕ್ಕೆ ಮತ್ತು ಬಲದಿಂದ ಎಡಕ್ಕೆ ಒಂದೇ ರೀತಿ ಕಾಣುವ ಹೆಚ್ಚಿನ ಸಂಖ್ಯೆಗಳು ಇಲ್ಲಿವೆ: 353 868.

ಅವುಗಳನ್ನು ಕಂಡುಹಿಡಿಯುವುದು ಒಂದು ವಿನೋದದ ಆಟ. ಇತರೆ ಕೆಲವು ಸಂಖ್ಯೆಗಳನ್ನು ಬರೆಯಿರಿ.

ತೇಜಿಗೆ ಸೊನ್ನೆಗಳಿರುವ ಸಂಖ್ಯೆಗಳು ಇಷ್ಟ. ಅವಳಿಗೆ 210 404 ಮತ್ತು 800 ರಂತಹ ಸಂಖ್ಯೆಗಳು ಗೊತ್ತು.

ಅಂತಹ ಇನ್ನಷ್ಟು ಸಂಖ್ಯೆಗಳನ್ನು ಬರೆಯಿರಿ:



ನಾವು ಮಾಡೋಣ

1. ನನ್ನ ಬಳಿ 6 ಖಾಲಿ ಕಾಗದದ ಚೀಟಿಗಳಿವೆ. ನಾನು ಪ್ರತಿಯೊಂದರ ಮೇಲೆ 100, 10 ಅಥವಾ 1 ಬರೆಯಬಲ್ಲೆ. ಈ 6 ಚೀಟಿಗಳಿಂದ ನಾನು ಯಾವ ಸಂಖ್ಯೆಗಳನ್ನು ಮಾಡಬಹುದು? ಚರ್ಚಿಸಿ.



ಆರು ಚೀಟಿಗಳ ಮೇಲೆ 100 ಬರೆದಿದೆ. ಆರು ನೂರು.

ನಾಲ್ಕು ಚೀಟಿಗಳ ಮೇಲೆ 100 ಬರೆದಿದೆ ಮತ್ತು ಎರಡು ಚೀಟಿಗಳ ಮೇಲೆ 10 ಇದೆ. 420



100	100	100	100	100	10
100	100	100	100	100	10

a. 231 ಆಗಲು ಈ ಚೀಟಿಗಳ ಮೇಲೆ ನೀವು ಏನು ಬರೆಯುತ್ತೀರಿ?

b. 123 ಆಗಲು ಈ ಚೀಟಿಗಳ ಮೇಲೆ ನೀವು ಏನು ಬರೆಯುತ್ತೀರಿ?

2. ಇತರೆ ಸಂಖ್ಯೆಗಳನ್ನು ಮಾಡಿ.

a. ಸಂಖ್ಯೆಯು .....

b. ಸಂಖ್ಯೆಯು .....

ಮಾಡಬಹುದಾದ ಅತಿ ದೊಡ್ಡ ಸಂಖ್ಯೆ ಯಾವುದು? .....

ಈ ಚೀಟಿಗಳನ್ನು ಬಳಸಿ ಮಾಡಲು ಸಾಧ್ಯವಾಗದ ಸಂಖ್ಯೆಗಳು ಇವೆಯೇ? ಕಂಡುಹಿಡಿಯಿರಿ.

ಮಾಡಬಹುದಾದ ಅತಿ ಚಿಕ್ಕ ಸಂಖ್ಯೆ ಯಾವುದು? .....



ಶಿಕ್ಷಕರ ಟಿಪ್ಪಣಿ: ಇಂತಹ ಹೆಚ್ಚು ಸಮಸ್ಯೆಗಳನ್ನು ರಚಿಸಿ ಮತ್ತು ವಿದ್ಯಾರ್ಥಿಗಳು ಸಂಖ್ಯೆಗಳೊಂದಿಗೆ ಆಟವಾಡಲು ಪ್ರೋತ್ಸಾಹಿಸಿ.

ನನ್ನ ಸಂಖ್ಯೆಗಳು

3 ಮತ್ತು 8 ಅಂಕಿಗಳನ್ನು ತೆಗೆದುಕೊಂಡು ನಿಮಗೆ ಸಾಧ್ಯವಾದಷ್ಟು 2 ಅಥವಾ 3 ಅಂಕಿಗಳ ಸಂಖ್ಯೆಗಳನ್ನು ಮಾಡಿ. ನೀವು ಅಂಕಿಗಳನ್ನು ಪುನರಾವರ್ತಿಸಬಹುದು.



ಜೊಜೊ, 3 ಮತ್ತು 8 ರಿಂದ ನಾನು 38 ನ್ನು ಮಾಡಬಹುದು.

3 8 8 3 3 8

ನಾನು 338, 388 ನ್ನು ಮಾಡಬಹುದು.



3 3 8 3 8 8

2 ಅಂಕಿಯ ಸಂಖ್ಯೆಗಳು	3 ಅಂಕಿಯ ಸಂಖ್ಯೆಗಳು

ಸಂಖ್ಯೆಗಳನ್ನು ಜೋಡಿಸಿ.
ಚಿಕ್ಕದರಿಂದ ದೊಡ್ಡದಕ್ಕೆ
.....
.....

ಅತೀ ಚಿಕ್ಕ ಸಂಖ್ಯೆ:
ಅತೀ ದೊಡ್ಡ ಸಂಖ್ಯೆ:

ನಾವು ಯೋಚಿಸೋಣ

ತೇಜಿ ಪದಗಳನ್ನು ಬಳಸಿ ಸಂಖ್ಯೆಗಳನ್ನು ಮಾಡುತ್ತಿದ್ದಾಳೆ! ಅವಳು ನೀಲಿ ಕಾರ್ಡ್‌ಗಳನ್ನು ತೋರಿಸಿ 12 ಎಂದು ಹೇಳುತ್ತಾಳೆ. ಅವಳು ಹಳದಿ ಕಾರ್ಡ್‌ಗಳನ್ನು ತೋರಿಸಿ 14 ಎಂದು ಹೇಳುತ್ತಾಳೆ. ಏಕೆ?



ತೇಜಿ ಏನು ಮಾಡುತ್ತಿದ್ದಾಳೆ? ಕಂಡುಹಿಡಿಯಿರಿ.



ಶಿಕ್ಷಕರ ಟಿಪ್ಪಣಿ: ಆಗಾಗ ಈ ರೀತಿಯ ಆಟಗಳನ್ನು ಬೇರೆ ಬೇರೆ ಸಂಖ್ಯೆಗಳು ಹಾಗೂ ಸುಳುಹುಗಳೊಂದಿಗೆ ಆಟವಾಡಿ.

ಅಜ್ಜಿ ಇನ್ನೂ ಕೆಲವು ಸಂಖ್ಯೆಗಳನ್ನು ತೋರಿಸಿದಳು.

a.



7



1

b.



5




3


ಪದಗಳನ್ನು ಬಳಸಿಕೊಂಡು ಸಂಖ್ಯೆಗಳನ್ನು ಹೇಳುವ ಈ ವಿಧಾನವನ್ನು **'ಭೂತಸಂಖ್ಯಾ'** ಎಂದು ಕರೆಯಲಾಗುತ್ತದೆ. ಇದರ ಅರ್ಥ **ಸಂಖ್ಯಾಪದಗಳು.**

1. ಮುಂದಿನ ಕಾರ್ಡ್‌ಗಳಿಗೆ ಸಂಖ್ಯೆಗಳನ್ನು ಬರೆಯಿರಿ.

a.



b.



2. 0–9 ಕ್ಕೆ ಬೇರೆ ಪದಗಳನ್ನು ಆಲೋಚಿಸಿ.

15, 27 ಮತ್ತು 94 ಈ ಸಂಖ್ಯೆಗಳಿಗೆ ಹೊಸ ಕಾರ್ಡ್‌ಗಳನ್ನು ತಯಾರಿಸಿ.



ಶಿಕ್ಷಕರ ಟಿಪ್ಪಣಿ: ವಿದ್ಯಾರ್ಥಿಗಳಿಗೆ ಚಿರಪರಿಚಿತವಾದ ಸ್ಥಳೀಯ ಸಂದರ್ಭಗಳನ್ನು ಮತ್ತು ಭಾಷೆಗಳನ್ನು ಬಳಸಿ.

10 ತರಗತಿಯ ಪಾರ್ಟಿಯಲ್ಲಿ ಮೋಜು

A1W6Y3



3ನೇ ತರಗತಿಯ ಮಕ್ಕಳು ತರಗತಿಯಲ್ಲಿ ಸಂಭ್ರಮ ಆಚರಣೆಗೆ ತಯಾರಿ ನಡೆಸುತ್ತಿದ್ದಾರೆ. ಚಿತ್ರವನ್ನು ಗಮನಿಸಿ.





ನಾವು ಮಾಡೋಣ

ಮೇಲೆ ನೀಡಿರುವ ಚಿತ್ರದ ಆಧಾರದ ಮೇಲೆ ನೀವು ಮುಂದಿನ ಪ್ರಶ್ನೆಗಳಿಗೆ ಹೇಗೆ ಉತ್ತರಿಸುತ್ತೀರಿ ಎಂಬುದನ್ನು ಚರ್ಚಿಸಿ ಮತ್ತು ವಿವರಿಸಿ.

1. ಚಿತ್ರದಲ್ಲಿ ತೋರಿಸಿರುವ ವಿವಿಧ ಚಟುವಟಿಕೆಗಳು ಯಾವುವು?
2. ಶೆಲ್ಲಿ ಬಾಗಿಲಿನ ಎತ್ತರವನ್ನು ಹೇಗೆ ಕಂಡುಹಿಡಿಯುತ್ತಾಳೆ?
3. ಲೀನಾ ಮತ್ತು ಆದಿ ಒಂದೇ ಮೇಜಿನ ಉದ್ದವನ್ನು ಅಳೆಯಲು ತಮ್ಮ ಗೇಣನ್ನು ಬಳಸುತ್ತಾರೆ. ಇಬ್ಬರ ಅಳತೆಯು ಒಂದೇ ಆಗಿರುತ್ತದೆಯೇ?



ಶಿಕ್ಷಕರ ಟಿಪ್ಪಣಿ: ಔಪಚಾರಿಕ ಮತ್ತು ಅನೌಪಚಾರಿಕ ಉಪಕರಣಗಳನ್ನು ಬಳಸಿ ಉದ್ದದ ಅಳತೆಯ ಕೆಲವು ಉದಾಹರಣೆಗಳನ್ನು ಚಿತ್ರವು ತೋರಿಸುತ್ತದೆ. ಅಳೆಯುವ ವಿವಿಧ ರೀತಿಯ ವಿಧಾನಗಳನ್ನು ಮತ್ತು ಗೇಣು, ಹೆಜ್ಜೆಯಂತೆ ಮತ್ತು ಕಾಗದ ತೋರಣಗಳಂತಹ ಸೂಕ್ತ ಪದಗಳನ್ನು ಮಕ್ಕಳು ಗುರ್ತಿಸಲಿ.


4. ಅತಿ ಉದ್ದವಾದ ಜುಟ್ಟನ್ನು ಹೊಂದಿರುವ ಮಗುವಿಗೆ ವೃತ್ತ ಹಾಕಿ.

5. ತರಗತಿಯಲ್ಲಿ ಕಿಟಕಿಯ ಎತ್ತರದಷ್ಟೇ ಉದ್ದವಿರುವ ಕಾಗದದ ತೋರಣಗಳಿಗೆ ✓ ಗುರುತು ಹಾಕಿ.

6. ತರಗತಿಯ ಎರಡು ಗೋಡೆಗಳ ನಡುವಿನ ದೂರವನ್ನು ಕಂಡುಹಿಡಿಯಿರಿ. ನೀವು ಅದನ್ನು ಹೇಗೆ ಕಂಡುಹಿಡಿದಿರಿ? ಅದನ್ನು ಅಳೆಯಲು ಬೇರೆ ಮಾರ್ಗಗಳಿರಬಹುದೇ?

7. ಈ ಚಿತ್ರದಲ್ಲಿ ಮಕ್ಕಳು ಉದ್ದವನ್ನು ಅಳೆಯಲು ಬಳಸುತ್ತಿರುವ ಎಲ್ಲಾ ವಿಧಾನಗಳನ್ನು ಗುರುತಿಸಿ. ಯಾವ ವಿಧಾನವು ಉತ್ತಮವಾಗಿದೆ ಎಂದು ನೀವು ಭಾವಿಸುತ್ತೀರಿ ಮತ್ತು ಏಕೆ?

3ನೇ ತರಗತಿಯ ಮಕ್ಕಳು ವಿವಿಧ ಬಣ್ಣಗಳ ಕಾಗದದ ತೋರಣಗಳಿಂದ ಬೋರ್ಡ್‌ನ್ನು ಅಲಂಕರಿಸುತ್ತಿದ್ದಾರೆ.





ನಾವು ಮಾಡೋಣ

1. ಮುಂದೆ ಸೂಚಿಸಿರುವಂತೆ, ಮೇಲಿನ ಚಿತ್ರದಲ್ಲಿನ ಕಾಗದದ ತೋರಣಗಳಿಗೆ ಬಣ್ಣ ಹಚ್ಚಿ.
   (a) ಅತಿ ಚಿಕ್ಕದಾದ ಕಾಗದದ ತೋರಣಕ್ಕೆ ಕೆಂಪು ಬಣ್ಣ ಹಚ್ಚಿ. ನೀವು ಅತಿ ಚಿಕ್ಕದಾದ ತೋರಣವನ್ನು ಹೇಗೆ ಗುರುತಿಸಿದಿರಿ? ಚರ್ಚಿಸಿ.

   (b) ಅತಿ ಉದ್ದವಾದ ಕಾಗದದ ತೋರಣಕ್ಕೆ ಹಸಿರು ಬಣ್ಣ ಹಚ್ಚಿ. ನೀವು ಅತಿ ಉದ್ದವಾದ ತೋರಣವನ್ನು ಹೇಗೆ ಗುರುತಿಸಿದಿರಿ? ಚರ್ಚಿಸಿ.


2. ಹಸಿರು ಬೋರ್ಡ್‌ನ ಅಂಚನ್ನು ಅಲಂಕರಿಸಲು ಇನ್ನೂ ಎಷ್ಟು ವರ್ಣಮಯ ಕಾಗದದ ತೋರಣಗಳು ಬೇಕಾಗುತ್ತವೆ?

3. ಬೋರ್ಡ್‌ನ ಸಂಪೂರ್ಣ ಅಂಚನ್ನು ಅಲಂಕರಿಸಲು ಎಷ್ಟು  ಅಗತ್ಯವಿದೆ?


ನಾವು ಮಾಡೋಣ

1. ಮುಂದೆ ಕೊಟ್ಟಿರುವ ರೇಖೆಯ ಉದ್ದದಷ್ಟು ಉಣ್ಣೆ ಅಥವಾ ಹತ್ತಿಯ ದಾರವನ್ನು ಕತ್ತರಿಸಿ ಅಂಟಿಸಿ.

2. ಮುಂದೆ ನೀಡಿರುವ ತಂತಿಗಿಂತ ಉದ್ದವಾದ ತಂತಿಯನ್ನು ಎಳೆಯಿರಿ.




3. ಶೆಲ್ಲಿ ಮತ್ತು ಆದಿ ಹಿಡಿದಿರುವ ಅಲಂಕಾರದ ದಾರಕ್ಕಿಂತ ಚಿಕ್ಕದಾದ ದಾರವನ್ನು ಎಳೆಯಿರಿ.




4. ಚಿತ್ರದಲ್ಲಿ ತೋರಿಸಿರುವ ಮುಖದ ಮೇಲಿನ ಮೀಸೆಯ ಅರ್ಧದಷ್ಟು ಉದ್ದವಿರುವಂತೆ, ಮೀಸೆಯ ಉಳಿದ ಅರ್ಧಭಾಗವನ್ನು ರಚಿಸಿ.



5. ದಾರಗಳನ್ನು ಗಮನಿಸಿ ಮತ್ತು ಆದಿಗೆ ಅತಿ ಉದ್ದವಾದುದನ್ನು ಆಯ್ಕೆ ಮಾಡಲು ಸಹಾಯ ಮಾಡಿ. ನೀವು ಹೇಗೆ ಕಂಡುಕೊಂಡಿರಿ? ಚರ್ಚಿಸಿ.




ಶೆಲ್ಲಿ ಮತ್ತು ಆದಿ ಔತಣಕೂಟಕ್ಕಾಗಿ ತರಗತಿಯೊಳಗೆ ದೊಡ್ಡ ಮೇಜನ್ನು ತೆಗೆದುಕೊಂಡು ಹೋಗಬೇಕಾಗಿದೆ. ಇಬ್ಬರಿಗೂ ಸರಿಸಲು ಸಾಧ್ಯವಾಗದಷ್ಟು ಮೇಜು ಭಾರವಾಗಿದೆ. ಮೇಜನ್ನು ಎತ್ತದೆಯೇ, ಅದನ್ನು ತರಗತಿಯ ಬಾಗಿಲಿನ ಮೂಲಕ ಕೊಂಡಯ್ಯಬಹುದೇ ಎಂದು ಅವರು ಹೇಗೆ ಲೆಕ್ಕಾಚಾರ ಮಾಡಬಹುದು? ಅವರು ಏನು ಮಾಡಬೇಕು ಎಂಬುದನ್ನು ಕಂಡುಹಿಡಿಯಲು ಅವರಿಗೆ ಸಹಾಯ ಮಾಡಿ.



ಮೇಜಿನ ಉದ್ದ ಮತ್ತು ಅಗಲ ಎರಡೂ ಬಾಗಿಲಿನ ಅಗಲಕ್ಕಿಂತ ಹೆಚ್ಚಿದ್ದರೆ, ಬಾಗಿಲಿನ ಒಳಗೆ ಮೇಜನ್ನು ತೆಗೆದುಕೊಂಡು ಹೋಗಲು ಯಾವುದಾದರೂ ಮಾರ್ಗವಿರಬಹುದೇ?

ನಾವು ಆಡೋಣ

ಬಾಕ್ಸ್‌ಗಳು, ಬ್ಯಾಗ್‌ಗಳು ಅಥವಾ ನಿಮ್ಮ ತರಗತಿಯಲ್ಲಿ ಲಭ್ಯವಿರುವ ಇತರ ಯಾವುದೇ ವಸ್ತುಗಳನ್ನು ಬಳಸಿ ಒಂದು ಸೇತುವೆಯನ್ನು ಮಾಡಿ. ಸೇತುವೆ ಚಲಿಸದಂತೆ ಬಾಕ್ಸ್‌ಗಳನ್ನು ಇರಿಸಿ ಅಥವಾ ಜೋಡಿಸಿ. ನಿಮ್ಮ ತರಗತಿಯಲ್ಲಿರುವ ಕೆಲವು ವಸ್ತುಗಳನ್ನು ತೆಗೆದುಕೊಳ್ಳಿ ಮತ್ತು ಆ ವಸ್ತುಗಳು ಸೇತುವೆಯ ಮೂಲಕ ಹಾದು ಹೋಗಬಲ್ಲದೇ ಊಹಿಸಿ.





ನಿಮ್ಮ ಶಾಲೆಯ ಗೇಟ್ ಮೂಲಕ ಹಾದುಹೋಗಲು ಸಾಧ್ಯವಾಗದ ಕೆಲವು ವಸ್ತುಗಳನ್ನು ನೀವು ಹೆಸರಿಸಬಲ್ಲಿರಾ? ಚರ್ಚಿಸಿ.



ಶಿಕ್ಷಕರ ಟಿಪ್ಪಣಿ: ಮೇಜು ಮತ್ತು ಬಾಗಿಲಿನ ಉದಾಹರಣೆಯಲ್ಲಿರುವಂತೆ ಎರಡು ಉದ್ದಗಳನ್ನು ಒಂದರ ಪಕ್ಕ ಒಂದರಂತೆ ತಂದು ಹೋಲಿಸುವುದು ಉದ್ದಗಳನ್ನು ಯಾವಾಗಲೂ ಸಾಧ್ಯವಿಲ್ಲ. ಸಾಮಾನ್ಯ ಮಾನವನ್ನು ಉಪಯೋಗಿಸಿ ಪರೋಕ್ಷವಾಗಿ ಅಳೆಯಬಹುದು ಎಂಬುದನ್ನು ಈ ಅಭ್ಯಾಸವು ಸಹಾಯ ಮಾಡುತ್ತದೆ.

ಇವು ಎಲ್ಲದಕ್ಕೂ ಸರಿಯೇ?


ನಾಟಕಕ್ಕಾಗಿ ವೇಷಭೂಷಣಗಳನ್ನು ತಯಾರಿಸಲು ಮಕ್ಕಳು ತಮ್ಮ ದೇಹದ ಅಂಗಗಳನ್ನು ಅಳೆಯುತ್ತಿದ್ದಾರೆ.





ಅವರು ಈ ಮುಂದಿನಂತೆ ಹೇಳಿಕೆಗಳನ್ನು ನೀಡಿದ್ದಾರೆ. ಅವು ಎಲ್ಲಾ ಮಕ್ಕಳಿಗೂ ಸರಿ ಎಂದು ನೀವು ಭಾವಿಸುವಿರಾ? ಪರಿಶೀಲಿಸೋಣ. ಅಳತೆ ಮಾಡಲು ನಿಮ್ಮ ಸ್ನೇಹಿತರ ಸಹಾಯವನ್ನು ತೆಗೆದುಕೊಳ್ಳಿ. ಸರಿಯಾದ ಉತ್ತರಕ್ಕೆ ✓ ಗುರುತು ಹಾಕಿ.

1. ನಿಮ್ಮ ತಲೆ 3 ಗೇಣಿನಷ್ಟು ದುಂಡಾಗಿದೆ. ಸರಿ/ತಪ್ಪು
2. ನಿಮ್ಮ ಮುಂಗೈನ ಉದ್ದ ನಿಮ್ಮ ಪಾದಗಳ ಉದ್ದಕ್ಕೆ ಸಮವಾಗಿರುತ್ತದೆ. ಸರಿ/ತಪ್ಪು
3. ನಿಮ್ಮ ಎತ್ತರವು, ನಿಮ್ಮ ತೋಳುಗಳನ್ನು ಅಗಲವಾಗಿ ಚಾಚಿದ ಉದ್ದಕ್ಕೆ ಸಮವಾಗಿರುತ್ತದೆ. ಸರಿ/ತಪ್ಪು

ಶೆಲ್ಲಿ ನಾಟಕಕ್ಕೆ ಪರದೆಗಳನ್ನು ಮಾಡಲು ಬಯಸುತ್ತಾಳೆ. ಲೀನಾ ತನ್ನ ತಾಯಿಯ ಸೀರೆಯನ್ನು ತಂದಳು. ಗೋಡೆಯ ಉದ್ದವನ್ನು ಅಳೆಯಲು ಆದಿ ತನ್ನ ಪೆನ್ಸಿಲ್ ಬಳಸಿದನು.








ಒಂದು ಮೀಟರ್ ಉದ್ದದ ಹಗ್ಗವನ್ನು ಮಾಡಲು ಹಂತಗಳು:

1. ಒಂದು ಮೀಟರ್ ಪಟ್ಟಿ ಅಥವಾ ಇಂಚ್ ಟೇಪ್ ಮತ್ತು ಹಗ್ಗ ಅಥವಾ ದಾರವನ್ನು ತೆಗೆದುಕೊಳ್ಳಿ.
2. ಅದರ ಒಂದು ತುದಿಯಲ್ಲಿ ಗಂಟು ಹಾಕಿ.
3. ಮೀಟರ್ ಪಟ್ಟಿಯನ್ನು ಹಗ್ಗದ ಉದ್ದಕ್ಕೂ ಇರಿಸಿ.



4. ಹಗ್ಗದ ಮೇಲೆ ಒಂದು ಮೀಟರ್ ಗುರುತಿಸಿ ಮತ್ತು ಅಲ್ಲಿ ಗಂಟು ಹಾಕಿ.
5. ಈಗ ಎರಡು ಗಂಟುಗಳ ನಡುವಿನ ಉದ್ದ ಒಂದು ಮೀಟರ್ ಆಗಿದೆ. ಹಗ್ಗದ ಅಳತೆ ಒಂದು ಮೀಟರ್ ಇದೆಯೇ ಎಂಬುದನ್ನು ಮತ್ತೊಮ್ಮೆ ಪರಿಶೀಲಿಸಿ.


ತರಗತಿಯ ಗೋಡೆಯ ಮೇಲೆ ಒಂದು ಮೀಟರ್ ಉದ್ದವನ್ನು ಗುರುತಿಸಿ ನಿಮ್ಮ ಎತ್ತರವನ್ನು ಅಳೆಯಿರಿ.

ಒಂದು ಮೀಟರ್‌ಗಿಂತ ಹೆಚ್ಚು ಎತ್ತರವಿರುವ ಮತ್ತು ಒಂದು ಮೀಟರ್‌ಗಿಂತ ಕಡಿಮೆ ಎತ್ತರವಿರುವ ನಿಮ್ಮ ಸ್ನೇಹಿತರ ಹೆಸರುಗಳನ್ನು ಬರೆಯಿರಿ.

ಒಂದು ಮೀಟರ್‌ಗಿಂತ ಹೆಚ್ಚಿರುವ ಎತ್ತರಗಳು		ಒಂದು ಮೀಟರ್‌ಗಿಂತ ಕಡಿಮೆ ಇರುವ ಎತ್ತರಗಳು	
_____	_____	_____	_____
_____	_____	_____	_____
_____	_____	_____	_____
_____	_____	_____	_____
_____	_____	_____	_____



ಈ ಮಕ್ಕಳಲ್ಲಿ ಅತ್ಯಂತ ಎತ್ತರದವರಿಗೆ ವೃತ್ತ ಹಾಕಿ.



ಅವರಲ್ಲಿ ಅತ್ಯಂತ ಎತ್ತರದವರು ಯಾರು? ಚರ್ಚಿಸಿ.

ಉದ್ದವು ಒಂದು ಮೀಟರ್, ಒಂದು ಮೀಟರ್‌ಗಿಂತ ಹೆಚ್ಚು ಮತ್ತು ಒಂದು ಮೀಟರ್‌ಗಿಂತ ಕಡಿಮೆ ಇರುವ, ನಿಮ್ಮ ಸುತ್ತಲಿನ ವಸ್ತುಗಳ ಹೆಸರುಗಳನ್ನು ಬರೆಯಿರಿ.

ಒಂದು ಮೀಟರ್‌ಗಿಂತ ಹೆಚ್ಚು ಉದ್ದವಿರುವ ವಸ್ತುಗಳು	ಒಂದು ಮೀಟರ್‌ಗಿಂತ ಕಡಿಮೆ ಉದ್ದವಿರುವ ವಸ್ತುಗಳು	ಒಂದು ಮೀಟರ್ ಉದ್ದಕ್ಕೆ ಸಮವಿರುವ ವಸ್ತುಗಳು




ಇದು ಒಂದು ಮೀಟರ್ ಉದ್ದವಾಗಿದೆ.



ಅದನ್ನು ಅರ್ಧ ಮಡಚಿ. ಇದು ಅರ್ಧ ಮೀಟರ್ ಉದ್ದವಿರುತ್ತದೆ.



ಅದನ್ನು ಮತ್ತೆ ಅರ್ಧದಷ್ಟು ಮಡಚಿ. ಇದು ಕಾಲು ಮೀಟರ್ ಉದ್ದವಾಗಿದೆ.





ನಾವು ಮಾಡೋಣ

1. ಒಂದು ಮೀಟರ್, ಅರ್ಧ ಮೀಟರ್ ಮತ್ತು ಕಾಲು ಮೀಟರ್ ಹಗ್ಗಗಳನ್ನು ಬಳಸಿಕೊಂಡು ವಿವಿಧ ವಸ್ತುಗಳ ಉದ್ದವನ್ನು ಕಂಡುಹಿಡಿಯಿರಿ. ಅವುಗಳ ಹೆಸರುಗಳನ್ನು ಬರೆಯಿರಿ ಮತ್ತು ಸೂಕ್ತವಾದ ಬಾಕ್ಸ್‌ಗಳಲ್ಲಿ ✓ ಮಾಡಿ.

ವಸ್ತುಗಳು	ಕಾಲು ಮೀಟರ್‌ಗಿಂತ ಕಡಿಮೆ	ಕಾಲು ಮೀಟರ್‌ಗಿಂತ ಹೆಚ್ಚು	ಅರ್ಧ ಮೀಟರ್‌ಗಿಂತ ಕಡಿಮೆ	ಅರ್ಧ ಮೀಟರ್‌ಗಿಂತ ಹೆಚ್ಚು	ಒಂದು ಮೀಟರ್‌ಗಿಂತ ಕಡಿಮೆ	ಒಂದು ಮೀಟರ್‌ಗಿಂತ ಹೆಚ್ಚು

2. ನೆಲದ ಮೇಲೆ ಒಂದು ರೇಖೆಯನ್ನು ಪ್ರಾರಂಭದ ರೇಖೆಯಾಗಿ ಗುರುತು ಮಾಡಿ. ನಂತರ ಪ್ರಾರಂಭದ ರೇಖೆಯಿಂದ ಒಂದು ಮೀಟರ್ ಅಂತರದಲ್ಲಿ ಇನ್ನೊಂದು ರೇಖೆಯನ್ನು ಗುರುತು ಮಾಡಿ. ಪ್ರಾರಂಭದ ರೇಖೆಯ ಮೇಲೆ ನಿಂತು ಜಿಗಿಯಿರಿ. ಕಾಲು ಮೀಟರ್, ಅರ್ಧ ಮೀಟರ್ ಮತ್ತು ಮೀಟರ್‌ಗಿಂತ ಹೆಚ್ಚು ಜಿಗಿಯುವ ಮಕ್ಕಳ ಹೆಸರುಗಳನ್ನು ಬರೆಯಿರಿ.

3. ಒಂದು ಚೆಂಡು ಅಥವಾ ಡಿಸ್ಕ್ ತೆಗೆದುಕೊಂಡು, ನಿಮಗೆ ಸಾಧ್ಯವಾದಷ್ಟು ದೂರ ಎಸೆಯಲು ಪ್ರಯತ್ನಿಸಿ. ನೀವು ಎಸೆದಿರುವುದು ಎಷ್ಟು ದೂರವಿದೆ ಎಂಬುದನ್ನು ಅಳೆಯಿರಿ.



ನಾವು ಮಾಡೋಣ

1. ಒಂದು ಮೀಟರ್ ಉದ್ದದ ಹಗ್ಗ ಅಥವಾ ಪಟ್ಟಿಯನ್ನು ಬಳಸಿ ನಿಮ್ಮ ಶಿಕ್ಷಕರು ಅಥವಾ ಪೋಷಕರ ಎತ್ತರವನ್ನು ಅಳೆಯಿರಿ.

2. ಉಣ್ಣೆ ಅಥವಾ ದಾರದ ಉದ್ದ ಒಂದು ಮೀಟರ್ ಇರುವಂತೆ ಅಂದಾಜು ಮಾಡಿ ಕತ್ತರಿಸಿ. ಅದೇ ರೀತಿ ಮಾಡಲು ನಿಮ್ಮ ಸ್ನೇಹಿತರಿಗೆ ಹೇಳಿ. ಈಗ ಮೀಟರ್ ಹಗ್ಗದ ಸಹಾಯದಿಂದ ಯಾರ ಅಂದಾಜು ಅತ್ಯಂತ ಸಮೀಪವಿದೆಯೆಂದು ಪರಿಶೀಲಿಸಿ.

3. ಒಂದು ಮೀಟರ್ ಉದ್ದದ ಹಗ್ಗವನ್ನು 4 ಸಮ ಭಾಗಗಳಾಗಿ ಕತ್ತರಿಸಿ. ನೀವು ಎಷ್ಟು ಬಾರಿ ಕತ್ತರಿಸಿದಿರಿ?

4. ಒಂದು ಮೀಟರ್ ಹಗ್ಗಕ್ಕೆ ಎಷ್ಟು ಹೆಜ್ಜೆಗಳು ಸಮವಾಗುತ್ತವೆ?

5. ತರಗತಿಯ ಗೋಡೆಯ ಒಂದು ಬದಿ ಎಷ್ಟು ಉದ್ದವಿದೆ ಎಂದು ಕಂಡುಹಿಡಿಯಲು ಮೀಟರ್ ಹಗ್ಗವನ್ನು ಬಳಸಿ.

11 ಭರ್ತಿ ಮಾಡುವುದು ಮತ್ತು ಎತ್ತುವುದು


K9G5P9





ನೀನು ಎಷ್ಟು ಕುಡಿಯಬಹುದು?

ಚಿಂಟು ಪೋಸ್ಟರ್ ಓದಿ ಶಂಭುಗೆ ಹೇಳುತ್ತಾನೆ.




ಚಿಂಟು ಏಕೆ ಸವಾಲನ್ನು ತೆಗೆದುಕೊಳ್ಳುವುದಿಲ್ಲ ಎಂದು ನೀವು ಭಾವಿಸುವಿರಿ? ನೀವು ಸವಾಲನ್ನು ಸ್ವೀಕರಿಸಬಹುದು ಎಂದು ಭಾವಿಸುವಿರಾ?



ಶಿಕ್ಷಕರ ಟಿಪ್ಪಣಿ: ಒಬ್ಬ ದೊಡ್ಡದಾದ ಲೋಟವನ್ನು ತೆಗೆದುಕೊಂಡರೆ. ನಾವು ಕಡಿಮೆ ಸಂಖ್ಯೆಯ ಲೋಟಗಳನ್ನು ಕುಡಿಯಬಹುದು ಎಂಬುದನ್ನು ವಿದ್ಯಾರ್ಥಿಗಳು ಅರ್ಥಮಾಡಿಕೊಳ್ಳಬೇಕು. ಆದ್ದರಿಂದ ಒಬ್ಬನೂ ಈ ಸವಾಲನ್ನು ಸ್ವೀಕರಿಸಬಾರದು.

ಯಾರ ಲೋಟದಲ್ಲಿ ಹೆಚ್ಚು ಹಿಡಿಸುತ್ತದೆ?

ನೀತಾ ಮತ್ತು ಮೋನು ರೀತು ಮನೆಗೆ ಭೇಟಿ ನೀಡುತ್ತಾರೆ. ರೀತುವಿನ ತಾಯಿ ಅವರಿಗೆ ಬೇರೆ ಬೇರೆ ಲೋಟಗಳಲ್ಲಿ ಹಾಲು ಕೊಡುತ್ತಾರೆ. ಯಾರು ಅತಿ ಹೆಚ್ಚು ಹಾಲು ಪಡೆಯುತ್ತಾರೆ ಎಂದು ನೀವು ಯೋಚಿಸುತ್ತೀರಿ?



ಯಾರು ಅತಿ ಹೆಚ್ಚು ಹಾಲು ಕುಡಿಯುತ್ತಾರೆ ಎಂದು ರೀತುವಿನ ಅಕ್ಕ ಹೀಗೆ ಪತ್ತೆ ಮಾಡುತ್ತಾಳೆ.

ಅವಳು ಲೋಟಗಳಲ್ಲಿರುವ ಹಾಲನ್ನು ಒಂದೇ ಗಾತ್ರದ ಮೂರು ಲೋಟಗಳಲ್ಲಿ ಹಾಕುತ್ತಾಳೆ.

 ರೀತುವಿನ ಲೋಟ

 ಮೋನುವಿನ ಲೋಟ

 ನೀತಾಳ ಲೋಟ



ರೀತುವಿನ ಲೋಟ



ಮೋನುವಿನ ಲೋಟ



ನೀತಾಳ ಲೋಟ





ನಾವು ಚರ್ಚಿಸೋಣ

1. ಯಾರು ಅತಿ ಹೆಚ್ಚು ಹಾಲು ಕುಡಿದರು?
2. ಯಾರು ಅತಿ ಕಡಿಮೆ ಹಾಲು ಕುಡಿದರು?

3. ಬಿಟ್ಟ ಸ್ಥಳವನ್ನು 'ಹೆಚ್ಚು' ಅಥವಾ 'ಕಡಿಮೆ' ಪದ ಬಳಸಿ ಭರ್ತಿ ಮಾಡಿ.

a. ಮೋನುವಿನ ಲೋಟಕ್ಕಿಂತ, ನೀತಾಳ ಲೋಟದಲ್ಲಿ ..... ಹಾಲು ಇದೆ.

b. ನೀತಾಳ ಲೋಟಕ್ಕಿಂತ ಮೋನುವಿನ ಲೋಟದಲ್ಲಿ ..... ಹಾಲು ಇದೆ.

c. ನೀತಾಳ ಲೋಟಕ್ಕಿಂತ ರೀತುವಿನ ಲೋಟದಲ್ಲಿ ..... ಹಾಲು ಇದೆ.

4. ಸರಿಯಾದ ಹೆಸರಿಗೆ ✓ ಗುರುತು ಹಾಕಿ.

a. ನೀತಾ / ಮೋನು / ರೀತು ಲೋಟದಲ್ಲಿ ಅತಿ ಹೆಚ್ಚು ಹಾಲು ಇದೆ.

b. ನೀತಾ / ಮೋನು / ರೀತು ಲೋಟದಲ್ಲಿ ಅತಿ ಕಡಿಮೆ ಹಾಲು ಇದೆ.



ನಾವು ಮಾಡೋಣ

ನೀವು ಮನೆಯಿಂದ ವಿಭಿನ್ನ ಗಾತ್ರದ ಮೂರು ಪಾತ್ರೆಗಳನ್ನು (ಚಿಕ್ಕ ಬಟ್ಟಲು  , ಲೋಟ  , ಮತ್ತು ಬಾಟಲ್ ) ತೆಗೆದುಕೊಳ್ಳಿ. ಊಹಿಸಿ: ಎಷ್ಟು ಚಿಕ್ಕ ಬಟ್ಟಲುಗಳು ಲೋಟವನ್ನು ತುಂಬುತ್ತವೆ? ಎಷ್ಟು ಲೋಟಗಳು ಬಾಟಲ್‌ನ್ನು ತುಂಬುತ್ತವೆ? ನಿಮ್ಮ ಊಹೆ ಸರಿಯಾಗಿದೆಯೇ ಮೊದಲು ಊಹಿಸಿ, ನಂತರ ಒಂದು ಪಾತ್ರೆಯಿಂದ ಇನ್ನೊಂದು ಪಾತ್ರೆಗೆ ನೀರನ್ನು ಸುರಿಯಿರಿ.

ಪಾತ್ರೆ	ಚಿಕ್ಕ ಬಟ್ಟಲುಗಳ ಸಂಖ್ಯೆಗೆ ನನ್ನ ಊಹೆ	ಎಷ್ಟು ಬಟ್ಟಲುಗಳು
ಲೋಟ		
ಬಾಟಲ್		



1. ಬಿಟ್ಟ ಸ್ಥಳವನ್ನು 'ಅತಿ ಹೆಚ್ಚು' ಅಥವಾ 'ಅತಿ ಕಡಿಮೆ' ಪದ ಬಳಸಿ ಭರ್ತಿ ಮಾಡಿ.

a. ಲೋಟದಲ್ಲಿ ..... ನೀರು ಹಿಡಿಸುತ್ತದೆ.

b. ಬಾಟಲ್‌ನಲ್ಲಿ ..... ನೀರು ಹಿಡಿಸುತ್ತದೆ.

2. ನಿಮ್ಮ ಬಾಟಲ್‌ಗಿಂತ ಹೆಚ್ಚು ನೀರನ್ನು ಸಂಗ್ರಹಿಸಬಹುದಾದ, ನಿಮ್ಮ ಮನೆಯಲ್ಲಿ ಬಳಸುವ ಪಾತ್ರೆಗಳನ್ನು ಹೆಸರಿಸಿ.



ಶಿಕ್ಷಕರ ಟಿಪ್ಪಣಿ: ಮಕ್ಕಳು ಬೇರೆ ಬೇರೆ ಪಾತ್ರೆಗಳನ್ನು ತೆಗೆದುಕೊಳ್ಳಬಹುದು. ಆದರೆ ಅವರು ತಮ್ಮ ಸಾಮರ್ಥ್ಯದ ಬಗ್ಗೆ ತೀರ್ಮಾನಗಳನ್ನು ತೆಗೆದುಕೊಳ್ಳಲು ಸಾಧ್ಯವಾಗಬೇಕು.



ನಾವು ಮಾಡೋಣ



1. ಎಷ್ಟು ಸೌಟುಗಳಷ್ಟು ಪಾನಕವು ಬಟ್ಟಲನ್ನು ತುಂಬಿಸುತ್ತದೆ? .....
2. ಜಗ್‌ನಿಂದ ಎಷ್ಟು ಲೋಟ ನೀರು ತುಂಬಬಹುದು? .....
3. ಲೋಟದ ಅರ್ಧದಷ್ಟು ತುಂಬಲು ನೀವು ಏನನ್ನು ಬಳಸುತ್ತೀರಿ?
4. ಲೋಟಗಳಲ್ಲಿ ನಿಂಬೆ ಪಾನಕವನ್ನು ವಿತರಿಸಲು ಇವುಗಳಲ್ಲಿ ನೀವು ಯಾವುದನ್ನು ಬಳಸುತ್ತೀರಿ? ಏಕೆ?
5. 3 ಜಗ್ ನಿಂಬೆ ಪಾನಕದಿಂದ ಎಷ್ಟು ಲೋಟಗಳನ್ನು ತುಂಬಿಸಬಹುದು?
6. 4 ಲೋಟಗಳನ್ನು ತುಂಬಲು ಎಷ್ಟು ಸೌಟುಗಳಷ್ಟು ಪಾನಕ ಬೇಕು?
7. ಒಂದು ಜಗ್‌ನಲ್ಲಿ ಎಷ್ಟು ನಿಂಬೆ ಪಾನಕ ಹಿಡಿಸುತ್ತದೆ ಎಂದು ಕಂಡುಹಿಡಿಯಲು ನೀವು ಸೌಟು, ಬಟ್ಟಲು ಅಥವಾ ಲೋಟವನ್ನು ಬಳಸಬಹುದೇ?




ಶಿಕ್ಷಕರ ಟಿಪ್ಪಣಿ: ಪ್ರತಿ ವಸ್ತುವನ್ನು ಉಪಯೋಗಿಸಿಕೊಂಡು ಅವರು ಎಷ್ಟು ಬಾರಿ ಸುರಿಯಬೇಕೆಂದು ವಿದ್ಯಾರ್ಥಿಗಳು ಚರ್ಚಿಸಲಿ. ಕಡಿಮೆ ಸಾಮರ್ಥ್ಯದ ಪಾತ್ರೆಯನ್ನು ಉಪಯೋಗಿಸಿ ಹೇಗೆ ಹೆಚ್ಚು ಸಾಮರ್ಥ್ಯದ ಪಾತ್ರೆಯನ್ನು ತುಂಬಬಹುದು ಮತ್ತು ಹೆಚ್ಚು ಸಾಮರ್ಥ್ಯದ ಪಾತ್ರೆಗಳು ಕಡಿಮೆ ಸಾಮರ್ಥ್ಯದ ಹಲವಾರು ಪಾತ್ರೆಗಳನ್ನು ಹೇಗೆ ತುಂಬಬಹುದು ಎಂಬುದನ್ನು ಚರ್ಚಿಸಿ. ಎರಡೂ ಸಂದರ್ಭಗಳಲ್ಲಿ, ಪ್ರಮಾಣವು ಒಂದೇ ಆಗಿರುತ್ತದೆ ಎಂಬುದನ್ನು ಅವರು ತೀರ್ಮಾನಿಸಲಿ.

ಒಂದು ಅಳತೆ ಬಾಟಲ್


ಹಾಲಿನವನು ಪ್ರತಿದಿನ, ಅಳತೆಯ ಕಪ್ ಬಳಸಿ ಹಾಲು ಹಾಕುವುದನ್ನು ನೀತಾ ನೋಡುತ್ತಾಳೆ.

ಹಾಲು ಹಾಕುವವರು ಹಾಲು ನೀಡಲು ಅಳತೆ ಕಪ್‌ಗಳನ್ನು ಏಕೆ ಬಳಸುತ್ತಾರೆ ಎಂದು ನೀವು ಯೋಚಿಸುತ್ತೀರಿ? ನಿಮ್ಮ ಪೋಷಕರೊಂದಿಗೆ, ಅಜ್ಜ–ಅಜ್ಜಿಯರೊಂದಿಗೆ ಮತ್ತು ನಿಮ್ಮ ತರಗತಿಯಲ್ಲಿ ಚರ್ಚಿಸಿ.





ನೀತಾ ಬಾಟಲ್‌ನಿಂದ ನೀರನ್ನು ಜಗ್‌ಗೆ ಹಾಕುತ್ತಾಳೆ. ಜಗ್‌ನಲ್ಲಿ ನಿಖರವಾಗಿ 1 ಲೀಟರ್ ಹಿಡಿಸುತ್ತದೆ.





Let us Discuss
ನಾವು ಚರ್ಚಿಸೋಣ

1. ಮುಂದಿನ ವಾಕ್ಯಗಳಲ್ಲಿ ಸೂಕ್ತವಾದ ಪದಕ್ಕೆ ✓ ಮಾಡಿ.

   a) ಲೋಟದಲ್ಲಿ 1 ಲೀಟರ್‌ಗಿಂತ ಹೆಚ್ಚು / ಕಡಿಮೆ ಹಿಡಿಸುತ್ತದೆ.

b) ಬಟ್ಟಲಿನಲ್ಲಿ 1 ಲೀಟರ್‌ಗಿಂತ ಹೆಚ್ಚು / ಕಡಿಮೆ ಹಿಡಿಸುತ್ತದೆ.

c) ಜಗ್‌ನಲ್ಲಿ 1 ಲೀಟರ್‌ಗಿಂತ ಹೆಚ್ಚು / 1 ಲೀಟರ್‌ಗಿಂತ ಕಡಿಮೆ / ನಿಖರವಾಗಿ 1 ಲೀಟರ್ ಹಿಡಿಸುತ್ತದೆ.



ಶಿಕ್ಷಕರ ಟಿಪ್ಪಣಿ: ಮೇಲಿನ ಚಟುವಟಿಕೆಗಳನ್ನು ತರಗತಿಯಲ್ಲಿ ಮಾಡಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿ. ವಿದ್ಯಾರ್ಥಿಗಳ ಸಂಶೋಧನೆಗಳನ್ನು ಚರ್ಚಿಸಿ. ವಿದ್ಯಾರ್ಥಿಗಳು ತಾವು ಆಯ್ಕೆ ಮಾಡಿದ ಪಾತ್ರೆಗಳಿಗನುಗುಣವಾಗಿ ವಿಭಿನ್ನ ಉತ್ತರಗಳನ್ನು ಪಡೆಯಬಹುದು. ಶಿಕ್ಷಕರು ಕೆಲವು ಪಾತ್ರೆಗಳನ್ನು ತೆಗೆದುಕೊಂಡು ಪ್ರತಿಯೊಂದು 1 ಲೀಟರ್ ಅಥವಾ ಹೆಚ್ಚು ಅಥವಾ ಒಂದು ಲೀಟರ್‌ಗಿಂತ ಕಡಿಮೆ ಹಿಡಿದಿಟ್ಟುಕೊಳ್ಳುತ್ತದೆಯೇ ಎಂದು ಊಹಿಸಲು ಕೇಳಬಹುದು.

2. ಮನೆಯಲ್ಲಿ ನಿಖರವಾಗಿ 1 ಲೀಟರ್ ಹಿಡಿಸುವ ಪಾತ್ರೆಗಳನ್ನು ಹುಡುಕಿ. ಪರೀಕ್ಷಿಸಲು ನಿಮ್ಮ 1 ಲೀಟರ್ ಬಾಟಲ್ ಬಳಸಿ.

3. 1 ಲೀಟರ್‌ಗಿಂತ ಹೆಚ್ಚು ಅಥವಾ ಕಡಿಮೆ ಹಿಡಿಸುವ ಪಾತ್ರೆಗಳನ್ನು ಗುರುತಿಸಿ.



ನಾವು ಯೋಚಿಸೋಣ

ಚಿತ್ರವನ್ನು ಗಮನಿಸಿ ಮತ್ತು ಸೂಕ್ತವಾದ ಪದಕ್ಕೆ ✓ ಮಾಡಿ.



a) ಮಗ್‌ನಲ್ಲಿ ಒಂದು ಲೀಟರ್/ ಅರ್ಧ ಲೀಟರ್ ನೀರು ಹಿಡಿಸುತ್ತದೆ.

b) ಲೋಟದಲ್ಲಿ ಒಂದು ಲೀಟರ್/ ಅರ್ಧ ಲೀಟರ್/ ಕಾಲು ಲೀಟರ್ ನೀರು ಹಿಡಿಸುತ್ತದೆ.





ನಾವು ಅನ್ವೇಷಿಸೋಣ

ಮೊದಲು ಊಹಿಸಿ ಮತ್ತು 1 ಲೀಟರ್ ಬಾಟಲ್‌ನಿಂದ ಪರಿಶೀಲಿಸಿ.

a) ನಿಮ್ಮ ಮನೆಯಲ್ಲಿರುವ ಒಂದು ಬಕೆಟ್‌ನಲ್ಲಿ ಎಷ್ಟು ನೀರು ಹಿಡಿಸುತ್ತದೆ:

1 ಲೀಟರ್‌ಗಿಂತ ಹೆಚ್ಚು / ಕಡಿಮೆ / ಸಮ?


b) ನಿಮ್ಮ ಮನೆಯಲ್ಲಿರುವ ಒಂದು ಮಗ್‌ನಲ್ಲಿ ಎಷ್ಟು ನೀರು ಹಿಡಿಸುತ್ತದೆ:
ಅರ್ಧ ಲೀಟರ್‌ಗಿಂತ ಕಡಿಮೆ / ಹೆಚ್ಚು / ಸಮ?

c) ನಿಮ್ಮ ಮನೆಯಲ್ಲಿರುವ ಒಂದು ಲೋಟದಲ್ಲಿ ಎಷ್ಟು ನೀರು ಹಿಡಿಸುತ್ತದೆ:
ಕಾಲು ಲೀಟರ್‌ಗಿಂತ ಕಡಿಮೆ / ಹೆಚ್ಚು / ಸಮ?



ಶಿಕ್ಷಕರ ಟಿಪ್ಪಣಿ: ದಯವಿಟ್ಟು 1 ಲೀಟರ್, ½ ಲೀಟರ್ ಮತ್ತು ¼ ಲೀಟರ್ ಸಾಮರ್ಥ್ಯದ ಅಳತೆ ಮಾಡುವ ಕಪ್‌ಗಳು ಅಥವಾ ಪಾತ್ರೆಗಳನ್ನು ಖರೀದಿಸಿ. ಮಕ್ಕಳೊಂದಿಗೆ ನೀರನ್ನು ಅಳತೆ ಮಾಡುವ ಚಟುವಟಿಕೆಗಳನ್ನು ತರಗತಿಯಲ್ಲಿ ನಡೆಸಿ. ಅಲ್ಲದೆ, 4 ಕಾಲು ಲೀಟರ್ ಲೋಟಗಳು 1 ಲೀಟರ್‌ಗೆ ಸಮವಾಗಿವೆ ಮತ್ತು 2 ಅರ್ಧ ಲೀಟರ್‌ಗಳು 1 ಲೀಟರ್‌ಗೆ ಸಮವಾಗಿವೆ ಎಂದು ತರಗತಿಯಲ್ಲಿ ತೀರ್ಮಾನಿಸಲು ಮಕ್ಕಳನ್ನು ಪ್ರೋತ್ಸಾಹಿಸಿ.

ನಿಮಗೆ ತಿಳಿದಿದೆಯೇ?
1 ಲೀಟರ್ ಏಕ–ಬಳಕೆಯ ಪ್ಲಾಸ್ಟಿಕ್ ನೀರಿನ ಬಾಟಲ್ ತಯಾರಿಸಲು ನಮಗೆ ಸುಮಾರು 5 ಲೀಟರ್ ನೀರು ಬೇಕು! ನಾವು ನಮ್ಮದೇ ಲೋಟ ಅಥವಾ ಮರುಬಳಕೆ ಮಾಡಬಹುದಾದ ಬಾಟಲ್ ಬಳಸಿದರೆ ಕಡಿಮೆ ನೀರು ವ್ಯರ್ಥವಾಗುತ್ತದೆ.



ಭಾರ ಅಥವಾ ಹಗುರ?

ಚಿಂಟು ಒಂದು ಕೈಯಲ್ಲಿ 3 ಪಠ್ಯಪುಸ್ತಕಗಳನ್ನು ಮತ್ತು ಇನ್ನೊಂದು ಕೈಯಲ್ಲಿ ಒಂದು ಪೆನ್ಸಿಲ್ ಬಾಕ್ಸ್‌ನ್ನು 30 ಸೆಕೆಂಡ್‌ಗಳ ಕಾಲ ಹಿಡಿದಿದ್ದಾನೆ.



ಚಿಂಟುವಿನ ಒಂದು ಕೈ ಇನ್ನೊಂದಕ್ಕಿಂತ ಕೆಳಗಿದೆ. ಏಕೆ? ಚರ್ಚಿಸಿ.

ಮುಂದೆ ನೀಡಿರುವ ವಸ್ತುಗಳನ್ನು ಎರಡೂ ಕೈಗಳಲ್ಲಿ ಹಿಡಿದುಕೊಳ್ಳಲು ಪ್ರಯತ್ನಿಸಿ.ಜೋಡಿಗಳಲ್ಲಿ ಅವಲೋಕಿಸಿ. ಯಾವುದು ಭಾರ ಮತ್ತು ಯಾವುದು ಹಗುರ?

ಯಾವುದು ಹಗುರ ಮತ್ತು ಯಾವುದು ಭಾರ ಎಂಬುದನ್ನು ನೀವು ಮತ್ತು ನಿಮ್ಮ ಸ್ನೇಹಿತರು ಒಪ್ಪುತ್ತೀರಾ?

ಹೋಲಿಸುವ ವಸ್ತುಗಳು	ನನ್ನ ಅವಲೋಕನ	ನನ್ನ ಸ್ನೇಹಿತನ ಅವಲೋಕನ
ಲಂಚ್ ಬಾಕ್ಸ್ ಮತ್ತು ಪೆನ್ಸಿಲ್ ಬಾಕ್ಸ್	..... ಗಿಂತ ..... ಹೆಚ್ಚು ಭಾರವಿದೆ.	..... ಗಿಂತ ..... ಹೆಚ್ಚು ಭಾರವಿದೆ.
ನಿಮ್ಮ ಶಾಲಾ ಬ್ಯಾಗ್ ಮತ್ತು ಲಂಚ್ ಬ್ಯಾಗ್		
ಸೇಬು ಮತ್ತು ಕಲ್ಲಂಗಡಿ ಹಣ್ಣು		
ಗಾಳಿ ತುಂಬಿರುವ ಬಲೂನ್ ಮತ್ತು ಬ್ಯಾಸ್ಕೆಟ್ ಬಾಲ್		



ಶಿಕ್ಷಕರ ಟಿಪ್ಪಣಿ: ಭಾರವಾದ ವಸ್ತುಗಳು ತಮ್ಮ ತೂಕದಿಂದ ಕೆಳಗೆ ಹೋಗುತ್ತವೆ ಎಂಬುದನ್ನು ವಿದ್ಯಾರ್ಥಿಗಳು ಅರ್ಥ ಮಾಡಿಕೊಳ್ಳುವ ಅವಶ್ಯಕತೆಯಿದೆ. ಶಿಕ್ಷಕರು ತಕ್ಕಡಿ (pan balance) ತಂದು ಅಥವಾ ಒಬ್ಬ ತರಕಾರಿ ಮಾಡುವವನನ್ನು ಕರೆಸಿ ಮಕ್ಕಳಿಗೆ ತೂಕದ ಬಗ್ಗೆ ಸ್ವಲ್ಪ ಅನುಭವವನ್ನು ನೀಡಬಹುದು.



ನಾವು ಮಾಡೋಣ

1. ಮುಂದಿನ ಕೋಷ್ಟಕದಲ್ಲಿ ವಸ್ತುಗಳ ಹೆಸರುಗಳು ಮತ್ತು ಅವುಗಳ ತೂಕಗಳನ್ನು ಬರೆಯಿರಿ.



	ವಸ್ತು	ಎಷ್ಟು ನಾಣ್ಯಗಳು ಅಥವಾ ರಬ್ಬರ್‌ಗಳು ವಸ್ತುವಿನ ತೂಕಕ್ಕೆ ಸಮವಾಗುತ್ತದೆ?
a.	 ಪೆನ್ಸಿಲ್	
b.	 ಪಿಂಗ್‌ಪಾಂಗ್ ಚೆಂಡು	
c.		

d.		
e.		

2. ಸ್ವಲ್ಪ ಭಾರವಾದ ವಸ್ತುಗಳನ್ನು ಅಳೆಯಲು ಮತ್ತೊಂದು ತೂಕವನ್ನು ಮಾಡೋಣ. ಒಂದು ಬೆಂಕಿಪೊಟ್ಟಣವನ್ನು ಮರಳಿನಿಂದ ತುಂಬಿ ಮತ್ತು ಮುಂದಿನ ವಸ್ತುಗಳನ್ನು ತೂಕ ಮಾಡಲು ಇದನ್ನು ಬಳಸಿ. ಬೆಂಕಿಪೊಟ್ಟಣಗಳಲ್ಲಿ ತೂಕವನ್ನು ಊಹಿಸಿ. ನಂತರ ಪರಿಶೀಲಿಸಿ.

ವಸ್ತು	ವಸ್ತುವಿನ ತೂಕಕ್ಕೆ ಸಮವಾಗಲು ಅಗತ್ಯವಿರುವ ಬೆಂಕಿಪೊಟ್ಟಣಗಳ ಸಂಖ್ಯೆಗೆ ನಿಮ್ಮ ಊಹೆ	ವಸ್ತುವಿನ ತೂಕಕ್ಕೆ ಸಮವಾಗಲು ಬಳಸಲಾದ ಬೆಂಕಿ ಪೊಟ್ಟಣಗಳ ಸಂಖ್ಯೆ
ಪೆನ್ಸಿಲ್ ಬಾಕ್ಸ್ 		
ಚಮಚ 		
4 ಗೋಲಿಗಳು 		

ಅಳೆಯಲಾದ ಎಲ್ಲಾ ವಸ್ತುಗಳ ಹೆಸರುಗಳನ್ನು ಕ್ರಮವಾಗಿ ಅತಿ ಹಗುರದಿಂದ ಅತಿ ಭಾರದವರೆಗೆ ಬರೆಯಿರಿ.

.....



ಶಿಕ್ಷಕರ ಟಿಪ್ಪಣಿ: ಒಂದು ಸರಳ ತಕ್ಕಡಿಯನ್ನು ಖರೀದಿಸಿ. ಸುಲಭವಾಗಿ ಲಭ್ಯವಿರುವ ನಾಣ್ಯಗಳು ಅಥವಾ ಬಳಕೆಯಲ್ಲಿಲ್ಲದ ಎರೇಸರ್‌ಗಳನ್ನು ಬಳಸಿ.



ನಾವು ಮಾಡೋಣ

ತೂಕದ ಬೇಟೆ



ಈ ಚಟುವಟಿಕೆಯನ್ನು ಗುಂಪುಗಳಲ್ಲಿ ಮಾಡಿ. ನಿಮ್ಮ ಗುಂಪಿನಲ್ಲಿ ನಿಮ್ಮ ಬ್ಯಾಗ್‌ಗಿಂತ ಭಾರವಾದ ಬ್ಯಾಗ್ ಹುಡುಕಿ. ನಿಮ್ಮ ಬ್ಯಾಗ್‌ಗಿಂತ ಹಗುರವಾದ ಬ್ಯಾಗ್ ಹುಡುಕಿ. ಚರ್ಚಿಸಿ.

1. ನಿಮ್ಮ ಬ್ಯಾಗ್ ಏಕೆ ಭಾರವಾಗಿದೆ ಅಥವಾ ಹಗುರವಾಗಿದೆ?
2. ಬ್ಯಾಗ್‌ನಲ್ಲಿರುವ ಪುಸ್ತಕಗಳ ಸಂಖ್ಯೆಯಲ್ಲಿ ವ್ಯತ್ಯಾಸವಿದೆಯೇ ಎಂಬುದನ್ನು ನೋಡಲು, ಪುಸ್ತಕಗಳನ್ನು ಎಣಿಸಿ.
3. ಒಂದು ಪುಸ್ತಕವನ್ನು ಸ್ಥಳಾಂತರಿಸುವುದರ ಮೂಲಕ ನೀವು ಒಂದೇ ತೂಕದ ಎರಡು ಬ್ಯಾಗ್‌ಗಳನ್ನು ಮಾಡಬಹುದೇ? ಚರ್ಚಿಸಿ.

ಒಂದು ಕಿಲೋಗ್ರಾಂ ಎಷ್ಟು?




ನಿಮ್ಮ ಪೋಷಕರ ಸಹಾಯದಿಂದ, ನಿಮ್ಮ ಮನೆಯಲ್ಲಿ ವಸ್ತುಗಳ ಮೇಲೆ 1 ಕಿಲೋಗ್ರಾಂ ಎಂದು ಬರೆದಿರುವ ವಸ್ತುಗಳನ್ನು ಹುಡುಕಿ. ನಿಮ್ಮ ಕೈಯಿಂದ ಅದನ್ನು ಎತ್ತಿ ಅನುಭವಿಸಿ ಮತ್ತು ಇತರೆ ಯಾವ ವಸ್ತುಗಳು 1 ಕಿಲೋಗ್ರಾಂ ಆಗಿರಬಹುದು, ಊಹಿಸಿ. ವಸ್ತುವಿನ ಲೇಬಲ್‌ನ್ನು ಗಮನಿಸುವ ಮೂಲಕ ಅಥವಾ ನಿಮ್ಮ ಪೋಷಕರನ್ನು ಕೇಳುವ ಮೂಲಕ ಪರಿಶೀಲಿಸಿ.

4. 1 ಕಿಲೋಗ್ರಾಂ ಇರುವ ವಸ್ತುಗಳ ಹೆಸರುಗಳನ್ನು ಬರೆಯಿರಿ.


....., ...

ನಾವು 1 ಕಿಲೋಗ್ರಾಂ ಉಪ್ಪಿನ ಪ್ಯಾಕೆಟ್ ಅಥವಾ ಸುಲಭವಾಗಿ ಲಭ್ಯವಿರುವ ಯಾವುದೇ ಪ್ಯಾಕೆಟ್‌ನ್ನು ನಮ್ಮ ಅಳತೆಯ ಸಾಧನವಾಗಿ ಇಟ್ಟುಕೊಳ್ಳೋಣ.

5. ಇವುಗಳಲ್ಲಿ ಯಾವುದು 1 ಕಿಲೋಗ್ರಾಂಗಿಂತ ಹಗುರ ಅಥವಾ ಭಾರವಾಗಿರುತ್ತದೆ ಎಂದು ನೀವು ಊಹಿಸಬಲ್ಲಿರಾ? ಸೂಕ್ತವಾದ ಬಾಕ್ಸ್‌ನಲ್ಲಿ ✓ ಗುರುತು ಹಾಕಿ.

ವಸ್ತುಗಳು							
1 kg ಗಿಂತ ಹೆಚ್ಚು	☐	☐	☐	☐	☐	☐	☐
1 kg ಗಿಂತ ಕಡಿಮೆ	☐	☐	☐	☐	☐	☐	☐

6. ತಕ್ಕಡಿಯನ್ನು ನೋಡಿ ಮತ್ತು ಸರಿಯಾದ ಪದಕ್ಕೆ ✓ ಗುರುತು ಮಾಡಿ.

	
a) ಬೇಳೆಯ ಪ್ರತಿ ಪ್ಯಾಕೆಟ್ ಅರ್ಧ ಕಿಲೋಗ್ರಾಂ / ಕಿಲೋಗ್ರಾಂ ತೂಗುತ್ತದೆ.	b) ಪ್ರತಿ ಟೀ ಪ್ಯಾಕೆಟ್ ಅರ್ಧ ಕಿಲೋಗ್ರಾಂ / ಕಾಲು ಕಿಲೋಗ್ರಾಂ/ಕಿಲೋಗ್ರಾಂ ತೂಗುತ್ತದೆ.



ನಾವು ಅನ್ವೇಷಿಸೋಣ

ನಿಮ್ಮ ಮನೆಯ ಸುತ್ತಲೂ ಗಮನಿಸಿ. ಸುಮಾರು ಅರ್ಧ ಕಿಲೋಗ್ರಾಂ ಮತ್ತು ಕಾಲು ಕಿಲೋಗ್ರಾಂ ತೂಕವಿರುವ ವಸ್ತುಗಳನ್ನು ಗುರುತಿಸಿ. ನಿಮ್ಮ ಕೈಯಿಂದ ಅವುಗಳನ್ನು ಎತ್ತಿ ತೂಕವನ್ನು ಅನುಭವಿಸಿ ಮತ್ತು ಇತರೆ ಯಾವ ವಸ್ತುಗಳು ಅರ್ಧ ಅಥವಾ ಕಾಲು ಕಿಲೋಗ್ರಾಂ ಇರುತ್ತವೆ ಊಹಿಸಿ. ಸುಮಾರು ಕಾಲು ಕಿಲೋಗ್ರಾಂ ಮತ್ತು ಅರ್ಧ ಕಿಲೋಗ್ರಾಂ ತೂಕವಿರುವ ವಸ್ತುಗಳನ್ನು ಪಟ್ಟಿ ಮಾಡಿ. 1 ಕಿಲೋಗ್ರಾಂ ಉಪ್ಪಿನ ಪ್ಯಾಕೆಟ್‌ನೊಂದಿಗೆ ಪರಿಶೀಲಿಸಿ.






ಶಿಕ್ಷಕರ ಟಿಪ್ಪಣಿ: ಮಕ್ಕಳು ತಮ್ಮ ಊಹೆಗಳನ್ನು ಹೇಗೆ ಮಾಡುತ್ತಾರೆ ಎಂಬುದನ್ನು ತರಗತಿಯಲ್ಲಿ ಮಕ್ಕಳೊಂದಿಗೆ ಚರ್ಚೆ ನಡೆಸಿ. ತಕ್ಕಡಿ ಮತ್ತು 1 kg ಉಪ್ಪು ಪ್ಯಾಕೆಟ್ ಬಳಸಿ 1 kg, ½ kg, ಮತ್ತು ¼ kg ಗಳ ನಡುವಿನ ಸಂಬಂಧವನ್ನು ಕಂಡುಹಿಡಿಯಲು/ಅನ್ವೇಷಿಸಲು ಮಕ್ಕಳನ್ನು ಪ್ರೋತ್ಸಾಹಿಸಿ.

ಟ್ರಿಕಿ ಚೆಂಡುಗಳು

1. ಮೊಂಟು ತನ್ನ ಸ್ನೇಹಿತರಿಗೆ ಒಂದು ಒಗಟನ್ನು ಹೇಳುತ್ತಾನೆ: 3 ಚೆಂಡುಗಳು ಒಂದೇ ಗಾತ್ರವನ್ನು ಹೊಂದಿರುವಂತೆ ಕಾಣುತ್ತವೆ. ಅವುಗಳಲ್ಲಿ ಒಂದು ಹೆಚ್ಚು ಭಾರವಾಗಿರುತ್ತದೆ ಮತ್ತು 2 ಚೆಂಡುಗಳು ತೂಕದಲ್ಲಿ ಸಮವಿರುತ್ತವೆ. ನಿಮ್ಮ ಬಳಿ ತಕ್ಕಡಿ ಮಾತ್ರ ಇದ್ದು ಮತ್ತು ಯವುದೇ ತೂಕವಿಲ್ಲ. 3 ಚೆಂಡುಗಳು ಮತ್ತು ತಕ್ಕಡಿಯನ್ನು ಬಳಸಿ, ಹೆಚ್ಚು ಭಾರವಾದ ಚೆಂಡು ಯಾವುದು ಎಂದು ನೀವು ಕಂಡುಹಿಡಿಯಬಲ್ಲಿರಾ?





a) ನೀವು ಎಷ್ಟು ಬಾರಿ ತೂಕ ಮಾಡಬೇಕು?

b) ತಕ್ಕಡಿಯನ್ನು ಒಂದೇ ಬಾರಿ ಬಳಸಿ, ಭಾರವಾದ ಚೆಂಡು ಯಾವುದು ಎಂದು ತಿಳಿಸಿ.

2. ವಿಭಿನ್ನ ತೂಕಗಳು ಮತ್ತು ಬಣ್ಣಗಳನ್ನು ಹೊಂದಿರುವ ಒಂದೇ ಗಾತ್ರದ ಮೂರು ಚೆಂಡುಗಳಿವೆ: ಕೆಂಪು, ಕಿತ್ತಳೆ ಮತ್ತು ಹಸಿರು.

ನೀವು ತಕ್ಕಡಿಯನ್ನು ಬಳಸಬಹುದು ಆದರೆ ತೂಕವನ್ನು ಬಳಸುವಂತಿಲ್ಲ.



ಕೆಂಪು ಚೆಂಡು



ಕಿತ್ತಳೆ ಚೆಂಡು



ಹಸಿರು ಚೆಂಡು

ಯಾವುದು ಅತ್ಯಂತ ಭಾರ ಮತ್ತು ಯಾವುದು ಅತ್ಯಂತ ಹಗುರ ಎಂದು ನೀವು ಹೇಗೆ ಕಂಡುಹಿಡಿಯುತ್ತೀರಿ?

12 ಕೊಡಿ ಮತ್ತು ಪಡೆಯಿರಿ


P3E6W8



2ನ್ನು ಕೂಡಿ

5ನ್ನು ಕೂಡಿ

5ನ್ನು ಕಳೆಯಿರಿ



6ನ್ನು ಕೂಡಿ	234						
6ನ್ನು ಕಳೆಯಿರಿ	357						
9ನ್ನು ಕೂಡಿ	288						
9ನ್ನು ಕಳೆಯಿರಿ	331						

ಕಿಶನ್ ಒಂದು ದೊಡ್ಡ ಸಸ್ಯ ನರ್ಸರಿಯನ್ನು ನಡೆಸುತ್ತಿದ್ದಾರೆ, ಅಲ್ಲಿ ಅವರು ವಿವಿಧ ಸಸ್ಯಗಳನ್ನು ಬೆಳೆಸುತ್ತಾರೆ. ಹಳ್ಳಿಯ ಜನರು ಆಗಾಗ ಬಂದು, ಇವರಿಂದ ಸಸಿಗಳನ್ನು ಪಡೆದು ತಮ್ಮ ಮನೆಗಳಲ್ಲಿ ಬೆಳೆಸುತ್ತಾರೆ.



1. ಕಿಶನ್ ಬಳಿ ವಿವಿಧ ಔಷಧೀಯ ಮತ್ತು ಹೂಗಳ 364 ಸಸಿಗಳಿವೆ. ನಂತರ ಅವರು ತಮ್ಮ ಸ್ನೇಹಿತನ ಗ್ರಾಮಕ್ಕೆ ತೆರಳಿ ಅಲ್ಲಿಂದ 52 ಸಸಿಗಳನ್ನು ತಂದರು. ಈಗ ಅವರ ಬಳಿ ಎಷ್ಟು ಸಸಿಗಳಿವೆ?


ಸಮಸ್ಯೆಗಾಗಿ ಒಂದು ಬಾಕ್ಸ್ ಚಿತ್ರವನ್ನು ಬರೆಯೋಣ.

+ 52 ಸಸಿಗಳು

364 ಸಸಿಗಳು	?


ಸಮಸ್ಯೆಯನ್ನು ಬಿಡಿಸಲು ಮುಂದಿನಂತೆ ಕ್ರಮಬದ್ಧವಾದ ವಿಧಾನವನ್ನು ಬಳಸೋಣ.

10 ಹತ್ತುಗಳನ್ನು ಸೇರಿಸಿ 1 ನೂರು ಆಗುತ್ತದೆ.




364 ಸಸಿಗಳು 52 ಸಸಿಗಳು

4 ನೂರುಗಳನ್ನು ಪಡೆಯಲು 3 ನೂರುಗಳನ್ನು 1 ನೂರರೊಂದಿಗೆ ಸೇರಿಸಿ.



ಒಟ್ಟಾರೆ ಎಷ್ಟು ಸಸಿಗಳಿವೆ?


364ಕ್ಕೆ 52ನ್ನು ಕೂಡಿದಾಗ ನಮಗೆ 4 ನೂರುಗಳು, 1 ಹತ್ತು ಮತ್ತು 6 ಬಿಡಿಗಳು ಸಿಗುತ್ತದೆ.

ನೂರುಗಳು	ಹತ್ತುಗಳು	ಬಿಡಿಗಳು
		
4	1	6

364 ಸಸಿಗಳು + 52 ಸಸಿಗಳು = ... ಸಸಿಗಳು


364 + 52 = _____


ಅದನ್ನು ಬಿಡಿಸಲು ನೀವು ಸಂಖ್ಯಾರೇಖೆಯನ್ನೂ ಬಳಸಬಹುದು.





2. ಕಿಶನ್ ಒಂದು ಶಾಲೆಗೆ 230 ಸಸಿಗಳನ್ನು ಪೂರೈಸಲು ಆದೇಶ ಪಡೆದಿದ್ದಾರೆ. ಅವರು ತೆರೆದ ಪೆಟ್ಟಿಗೆಯಲ್ಲಿ 75 ಸಸಿಗಳನ್ನು ಜೋಡಿಸಿದ್ದಾರೆ. ಇನ್ನೂ ಎಷ್ಟು ಹೆಚ್ಚು ಸಸಿಗಳನ್ನು ಅವರು ಜೋಡಿಸಬೇಕು?

ನೀಡಿದ ಸಮಸ್ಯೆಯನ್ನು ಬಾಕ್ಸ್ ಚಿತ್ರವಾಗಿ ನಾವು ಬರೆಯುತ್ತೇವೆ:





ಸಮಸ್ಯೆಯನ್ನು ಬಿಡಿಸಲು ನೂರುಗಳು  , ಹತ್ತುಗಳು  ಮತ್ತು ಬಿಡಿಗಳನ್ನು ■ ಬಳಸೋಣ.

ನಾವು 230ರಲ್ಲಿ 75ನ್ನು ಕಳೆಯಬೇಕು.

ನೂರುಗಳು	ಹತ್ತುಗಳು	ಬಿಡಿಗಳು
2	3	0
		

5 ಬಿಡಿಗಳನ್ನು ತೆಗೆಯಲು, ನಾವು 1 ಹತ್ತನ್ನು 10 ಬಿಡಿಗಳಾಗಿ ಬದಲಾಯಿಸುತ್ತೇವೆ.

ನೂರುಗಳು	ಹತ್ತುಗಳು	ಬಿಡಿಗಳು
		



ಈಗ ನಾವು 10 ಬಿಡಿಗಳಿಂದ 5 ಬಿಡಿಗಳನ್ನು ತೆಗೆಯಬಹುದು.





ಶಿಕ್ಷಕರಿಗೆ ಟಿಪ್ಪಣಿ: ಈ ಸಮಸ್ಯೆಗಳನ್ನು ಬಿಡಿಸಲು ಪುಸ್ತಕದ ಕೊನೆಯಲ್ಲಿ ನೀಡಿದ ಡೈನಿಸ್ ಬ್ಲಾಕ್‌ಗಳನ್ನು ಮತ್ತು ಸಂಖ್ಯಾ ರೇಖೆ ಬಳಸುವಂತೆ ಮಕ್ಕಳನ್ನು ಪ್ರೋತ್ಸಾಹಿಸಿ. ಈ ಸಮಸ್ಯೆಗಳನ್ನು ಮಕ್ಕಳು ಸಂಖ್ಯೆಗಳನ್ನು ತಗೆದುಕೊಂಡು ವಿವಿಧ ರೀತಿಗಳಲ್ಲಿ ಕೂಡಿ ಮಾಡುವರು. ನೂರುಗಳು, ಹತ್ತುಗಳು ಮತ್ತು ಬಿಡಿಗಳ ನಡುವಿನ ಸಂಬಂಧವನ್ನು ಚರ್ಚಿಸಿ.

10 ಬಿಡಿಗಳಿಂದ 5 ಬಿಡಿಗಳನ್ನು ಕಳೆದಾಗ ನಮ್ಮ ಬಳಿ 5 ಬಿಡಿಗಳು ಉಳಿಯುತ್ತವೆ.



ಈಗ 70ನ್ನು ತೆಗೆಯಬೇಕು. ನೂರರ ಒಂದು ಬ್ಲಾಕ್‌ನ್ನು ತೆರೆಯುವುದರಿಂದ 10ರ 10 ಬ್ಲಾಕ್‌ಗಳು ದೊರೆಯುತ್ತವೆ ಎಂಬುದನ್ನು ನೆನಪಿಸಿಕೊಳ್ಳಿ.

ನೂರುಗಳು	ಹತ್ತುಗಳು	ಬಿಡಿಗಳು
2	2	5
		

70ನ್ನು ತೆಗೆದುಕೊಳ್ಳಿ

ನೂರುಗಳು	ಹತ್ತುಗಳು	ಬಿಡಿಗಳು
		

ನಮ್ಮಲ್ಲಿ ಇದು ಉಳಿದಿದೆ.

ನೂರುಗಳು	ಹತ್ತುಗಳು	ಬಿಡಿಗಳು
		

ಕಿಶನ್ ಬಳಿ ಈಗ ..... ಸಸಿಗಳಿವೆ.




ಶಿಕ್ಷಕರಿಗೆ ಟಿಪ್ಪಣಿ: ಆದರ್ಶ ಆಲ್ಗಾರಿತಂಗೆ ಹೋಗುವ ಬದಲು ಈ ಸಮಸ್ಯೆಗಳನ್ನು ಬಿಡಿಸಲು ವಿವಿಧ ತಂತ್ರಗಳಿಂದ ಡೈನಿಸ್ ಬ್ಲಾಕ್‌ಗಳನ್ನು ಮತ್ತು ಸಂಖ್ಯಾ ರೇಖೆ ಬಳಸುವಂತೆ ಮಕ್ಕಳನ್ನು ಪ್ರೋತ್ಸಾಹಿಸಿ.

ನಾವು ಮಾಡೋಣ


ಮುಂದಿನ ಸಮಸ್ಯೆಗಳನ್ನು ಬಿಡಿಸಲು. ಮೇಲೆ ತೋರಿಸಿರುವಂತೆ ಬಾಕ್ಸ್ ಚಿತ್ರಗಳನ್ನು ಬರೆಯಿರಿ. ನಂತರ ಸಮಸ್ಯೆಗಳನ್ನು ಬಿಡಿಸಲು ನೂರು, ಹತ್ತು, ಬಿಡಿ (ನೂ.ಹ.ಬಿ) ಬ್ಲಾಕ್‌ಗಳನ್ನು ಅಥವಾ ಸಂಖ್ಯಾ ರೇಖೆಯನ್ನು ಬಳಸಿ.

1. ಆಗಸ್ಟ್‌ನಲ್ಲಿ ಕಿಶನ್ ಬಳಿ 456 ಸಸಿಗಳಿವೆ. ಅವರು 63 ಸಸಿಗಳನ್ನು ವಿತರಿಸಿದರು. ಅವರ ಬಳಿ ಎಷ್ಟು ಸಸಿಗಳು ಉಳಿದಿವೆ?
2. ಕಿಶನ್ ಬಳಿ 309 ಸಸಿಗಳ ಸಂಗ್ರಹವಿದೆ. ಅವರು ಇನ್ನೂ 80 ಹೂ ಬಿಡುವ ಸಸಿಗಳನ್ನು ಪಡೆಯುತ್ತಾರೆ. ಈಗ ಅವರ ಬಳಿ ಎಷ್ಟು ಸಸಿಗಳಿವೆ?
3. ಕಿಶನ್ ಬಳಿ 270 ಗಿಡಗಳ ಸಸಿಗಳಿವೆ ಮತ್ತು ಅವರ ಸ್ನೇಹಿತನ ಬಳಿ 36 ಗಿಡಗಳ ಸಸಿಗಳಿವೆ. ಕಿಶನ್ ತನ್ನ ಸ್ನೇಹಿತನಿಗಿಂತ ಎಷ್ಟು ಹೆಚ್ಚು ಸಸಿಗಳನ್ನು ಹೊಂದಿದ್ದಾರೆ?


ಮುಂದಿನ ಬಾಕ್ಸ್ ಚಿತ್ರಗಳಲ್ಲಿ ನೀಡಿರುವ ಸಂಖ್ಯೆಗಳನ್ನು ಬಳಸಿಕೊಂಡು ಹೇಳಿಕೆ ಸಮಸ್ಯೆಗಳನ್ನು ಬರೆದು, ಅವುಗಳನ್ನು ಬಿಡಿಸಿ. ನೀವು ಸೂಕ್ತವಾದ ಸಂದರ್ಭಗಳಿಗಾಗಿ ಚಿತ್ರಗಳ ಸಹಾಯವನ್ನು ತೆಗೆದುಕೊಳ್ಳಬಹುದು.













ಮುಂದಿನ ಪ್ರಶ್ನೆಗಳನ್ನು ಬಿಡಿಸಲು ನೀಡಿರುವ ಗ್ರಿಡ್ ಬಳಸಿ. ಗ್ರಿಡ್‌ನಲ್ಲಿ ನಿಮ್ಮ ಉತ್ತರಗಳಿಗೆ ಬಣ್ಣ ಹಚ್ಚಿ.

521	522	523	524	525	526	527	528	529	530
511	512	513	514	515	516	517	518	519	520
501	502	503	504	505	506	507	508	509	510
491	492	493	494	495	496	497	498	499	500
481	482	483	484	485	486	487	488	489	490
471	472	473	474	475	476	477	478	479	480
461	462	463	464	465	466	467	468	469	470
451	452	453	454	455	456	457	458	459	460

456 + 10 466

481 + 19 ____

489 + 21 + 15 ____

405 + 23 ____

467 + 51 ____

519 – 40 ____




ಶಿಕ್ಷಕರಿಗೆ ಟಿಪ್ಪಣಿ: ಮೇಲಿನ ಗ್ರಿಡ್ ಬಳಸಿ ಸಮಸ್ಯೆಗಳನ್ನು ಬಿಡಿಸಲು ಮಕ್ಕಳನ್ನು ಪ್ರೋತ್ಸಾಹಿಸಿ. 100, 10 ಮತ್ತು 1ನ್ನು ಕೂಡಿದಾಗ ಅಂಕಿಗಳಲ್ಲಿ ಆಗುವ ಬದಲಾವಣೆಯ ವಿನ್ಯಾಸದತ್ತ ಮಕ್ಕಳು ಗಮನಹರಿಸುವಂತೆ ಮಾಡಿ.

ಸೂಚಿಸಿರುವಂತೆ ಮಾಡಿ.

100ನ್ನು ಕೂಡಿ	10ನ್ನು ಕೂಡಿ	1ನ್ನು ಕೂಡಿ
269	269	269
369		
	289	

100ನ್ನು ಕೂಡಿ	10ನ್ನು ಕೂಡಿ	1ನ್ನು ಕೂಡಿ
454	454	454
		455




ಹಲವು ವರ್ಷಗಳ ಹಿಂದೆ, 'ಜಾದುಪುರ' ಗ್ರಾಮದಲ್ಲಿ ಜನರು ತಮ್ಮ ಅಗತ್ಯಕ್ಕೆ ಅನುಗುಣವಾಗಿ ವಸ್ತುಗಳನ್ನು ವಿನಿಮಯ ಮಾಡಿಕೊಳ್ಳುತ್ತಿದ್ದರು. ಶಾಮು ಕಾಕಾ 5 ಮೂಟೆ ಅಕ್ಕಿಯನ್ನು ದರಿಯಾ ದೀದಿಗೆ ಕೊಟ್ಟರು. ಇದಕ್ಕೆ ಪ್ರತಿಯಾಗಿ ದರಿಯಾ ದೀದಿ 10 ಚೀಲ ತರಕಾರಿಗಳನ್ನು ಕೊಟ್ಟರು. ದರಿಯಾ ದೀದಿ, 5 ಚೀಲ ಈರುಳ್ಳಿ ನೀಡಿ ಬಬ್ಲು ದಾದಾರಿಂದ 2 ಸೀರೆಗಳನ್ನು ಪಡೆದರು.



ಹೀಗೆ ಗ್ರಾಮದ ಜನರು ತಮ್ಮ ವಸ್ತುಗಳನ್ನು ವಿನಿಮಯ ಮಾಡಿಕೊಂಡರು. ಶಾಮು ಕಾಕಾ ತಾವು ಕೊಟ್ಟ ಅಕ್ಕಿಗಾಗಿ ತರಕಾರಿ ಪಡೆದರು. ದರಿಯಾ ದೀದಿ ಎರಡು ಸೀರೆಗಳಿಗಾಗಿ, ಬಬ್ಲು ದಾದಾಗೆ ಸಾಕಷ್ಟು ಈರುಳ್ಳಿ ನೀಡಿದರು. ಈ ಹಳ್ಳಿಯ ಜನರು ವಸ್ತುಗಳನ್ನು ವಿನಿಮಯ ಮಾಡಿಕೊಳ್ಳುವಾಗ ಬೇರೆ ಬೇರೆ ಪ್ರಮಾಣಗಳಲ್ಲಿ ಏಕೆ ನೀಡಬೇಕು ಎಂಬುದನ್ನು ತರಗತಿಯಲ್ಲಿ ಚರ್ಚಿಸಿ.

ಇಂದಿನ ದಿನಗಳಲ್ಲಿ ನಾವು ನಮಗೆ ಬೇಕಾದ ವಸ್ತುಗಳಿಗೆ ಬದಲಾಗಿ ಹಣವನ್ನು ಬಳಸುತ್ತೇವೆ. ನೋಟ್‌ಗಳು ಮತ್ತು ನಾಣ್ಯಗಳು ವಿಭಿನ್ನ ಮೌಲ್ಯಗಳಲ್ಲಿರುತ್ತವೆ. ವಿವಿಧ ವಸ್ತುಗಳನ್ನು ಖರೀದಿಸಲು ಇವುಗಳನ್ನು ಬಳಸಲಾಗುತ್ತದೆ.

ಉದಾಹರಣೆಗೆ, 10 ರೂಪಾಯಿ ನೋಟ್‌ನಿಂದ ಒಂದು ಹವಾ ಮಿಠಾಯಿ ಅಥವಾ ಹತ್ತು ಟಾಫಿಗಳನ್ನು ಕೊಂಡುಕೊಳ್ಳಬಹುದು.



ಒಂದು ಹವಾ ಮಿಠಾಯಿಯ ಬೆಲೆಯು ಒಂದು ಟಾಫಿಯ ಬೆಲೆಗಿಂತ ಹೆಚ್ಚು.

ಸಲ್ಮಾ ₹ 100ಕ್ಕೆ ಎರಡು ಬಾಟಲ್ ಹಾಲು ಖರೀದಿಸಿದಳು. ಕಿರಣ್ ₹ 100ಕ್ಕೆ ಒಂದು ಬುಟ್ಟಿ ದಾಳಿಂಬೆ ಖರೀದಿಸಿದನು.

ಹೆಚ್ಚು ಬೆಲೆಯಿರುವುದಕ್ಕೆ ವೃತ್ತ ಹಾಕಿ: ಹಾಲಿನ ಬಾಟಲ್ ಅಥವಾ ದಾಳಿಂಬೆ?



ಅದೇ ನೋಟ್ ಬಳಸಿ ನಾವು ಖರೀದಿಸಬಹುದಾದ ಎರಡು ವಸ್ತುಗಳ ಬಗ್ಗೆ ಯೋಚಿಸಿ.

ನೋಟ್	ನೀವು ಖರೀದಿಸಬಹುದಾದ ವಸ್ತುಗಳು
	
	

ಎರಡು ಪಟ್ಟಿಗಳಲ್ಲಿ ನೀಡಿರುವ ಒಂದೇ ಮೌಲ್ಯ ಹೊಂದಿರುವ ನೋಟ್‌ಗಳು ಮತ್ತು ನಾಣ್ಯಗಳನ್ನು ಹೊಂದಿಸಿ.




































ಶಿಕ್ಷಕರಿಗೆ ಟಿಪ್ಪಣಿ: ಮಕ್ಕಳು ಮೂಲ ಟಿಪ್ಪಣಿಗಳಲ್ಲಿ ವ್ಯಕ್ತಿತ್ವಗಳು, ಸ್ಮಾರಕಗಳು, ದೃಷ್ಟಿಹೀನತೆ ಇರುವ ಜನರಿಗಾಗಿ ಉಬ್ಬುಚಿತ್ರಗಳು, ವಿವಿಧ ಭಾಷೆಗಳಲ್ಲಿ ಸಂಖ್ಯೆಗಳು ಮತ್ತು ಸಂಖ್ಯೆಗಳ ಹೆಸರುಗಳು ಮುಂತಾದ ವಿಭಿನ್ನ ವೈಶಿಷ್ಟ್ಯಗಳನ್ನು ಗಮನಿಸಲಿ. ನೋಟುಗಳು ಮತ್ತು ನಾಣ್ಯಗಳ ನಡುವಿನ ಸಂಪರ್ಕಗಳ ಬಗ್ಗೆ ಮಕ್ಕಳೊಂದಿಗೆ ಚರ್ಚಿಸಿ.

ಮುಂದೆ ನೀಡಿರುವ ವಸ್ತುಗಳನ್ನು ಖರೀದಿಸಲು ನೀಡಿರುವ ನೋಟ್‌ಗಳು ಮತ್ತು ನಾಣ್ಯಗಳನ್ನು ಬಳಸಿ. ಹಣವನ್ನು ನೀಡಲು ಕನಿಷ್ಠ ಎರಡು ಮಾರ್ಗಗಳನ್ನು ಕಂಡುಕೊಳ್ಳಿ. ನೀವು ನೋಟ್‌ಗಳು ಮತ್ತು ನಾಣ್ಯಗಳನ್ನು ಒಂದಕ್ಕಿಂತ ಹೆಚ್ಚು ಬಾರಿ ಬಳಸಬಹುದು.






















ನೀವು ಈ ನೋಟ್ ನೋಡಿದ್ದೀರಾ ?



₹ 500ರ ಒಂದು ನೋಟ್‌ಗೆ ಸಮನಾಗುವಷ್ಟು, ₹ 100ರ ನೋಟ್‌ಗಳನ್ನು ಚಿತ್ರಿಸಿ.

₹ 500ರ ನೋಟ್‌ಗೆ, ₹ 100ರ ಎಷ್ಟು ನೋಟ್‌ಗಳು ಸಮ? _____

₹ 500ರ ನೋಟ್‌ನಿಂದ ನೀವು ಯಾವ ಯಾವ ವಸ್ತುಗಳನ್ನು ಖರೀದಿಸಬಹುದು?


_____

_____



ಬೆಳಗ್ಗೆ ಪೀಟರ್ ಅಂಕಲ್‌ರವರ ಹಣದ ಪೆಟ್ಟಿಗೆಯಲ್ಲಿ ₹ 465 ಇದೆ. ಮಧ್ಯಾಹ್ನದ ಹೊತ್ತಿಗೆ ಅವರ ಬಳಿ ₹ 756 ಇದೆ. ಬೆಳಗ್ಗೆಯಿಂದ ಅವರು ಎಷ್ಟು ಸಂಪಾದಿಸಿದ್ದಾರೆ?


ಈ ಸಮಸ್ಯೆಗೆ ಬಾಕ್ಸ್ ಚಿತ್ರವನ್ನು ರಚಿಸೋಣ.



ನನ್ನ ಅಂದಾಜು.

₹ _____

₹ 756




₹ 465 ಹೊರತೆಗೆಯಿರಿ



ಎರಡು ಮೊತ್ತಗಳ ವ್ಯತ್ಯಾಸ = ₹ 291

ಅವರು ಬೆಳಗ್ಗೆಯಿಂದ ₹ 291 ಸಂಪಾದಿಸಿದ್ದಾರೆ.



ಈ ದಿನ ಪೀಟರ್ ಅಂಕಲ್ ₹ 640ಕ್ಕೆ ಅಕ್ಕಿ ಮತ್ತು ₹ 215ಕ್ಕೆ ಸಕ್ಕರೆಯನ್ನು ಮಾರಾಟ ಮಾಡಿದ್ದಾರೆ. ಈ ಮಾರಾಟದಿಂದ ಅವರು ಗಳಿಸಿದ ಹಣವೆಷ್ಟು?

ಸಮಸ್ಯೆಯನ್ನು ಬಿಡಿಸಲು ಬಾಕ್ಸ್ ಚಿತ್ರವನ್ನು ಬರೆಯಿರಿ.

?

ನನ್ನ ಅಂದಾಜು.

₹ _____

ಇದನ್ನು ಬಿಡಿಸಲು    ಇವುಗಳನ್ನು ಅಥವಾ ಸಂಖ್ಯಾರೇಖೆಯನ್ನು ಬಳಸಿ.



ಶಿಕ್ಷಕರ ಟಿಪ್ಪಣಿ: ಮಕ್ಕಳಿಗೆ ಆಟದ ಹಣ ಒದಗಿಸಿ ಅಥವಾ ಮಾಡಲು ತಿಳಿಸಿ. ಮಕ್ಕಳು ನೂರು, ಹತ್ತು ಮತ್ತು ಒಂದು ಮುಖ ಬೆಲೆಯ ನಾಣ್ಯಗಳನ್ನು ವಿನಿಮಯ ಮಾಡಿಕೊಳ್ಳಲು ಸಹಾಯ ಮಾಡಿ ಮತ್ತು ಸಮಸ್ಯೆಗಳನ್ನು ಪರಿಹರಿಸುವಲ್ಲಿ ಅವುಗಳನ್ನು ಬಳಸಿ.

ನಾವು ಮಾಡೋಣ

ಬಾಕ್ಸ್ ಚಿತ್ರಗಳನ್ನು ಬಳಸಿ ಮುಂದಿನ ಸಮಸ್ಯೆಗಳನ್ನು ಬಿಡಿಸಿ. ಉತ್ತರಗಳನ್ನು ಅಂದಾಜಿಸಿ. ನಂತರ ಸಮಸ್ಯೆಗಳನ್ನು ಬಿಡಿಸಲು ₹ 100, ₹ 10 ಮತ್ತು ₹ 1 ರ ನೋಟ್‌ಗಳನ್ನು ಅಥವಾ ಸಂಖ್ಯಾ ರೇಖೆಯನ್ನು ಬಳಸಿ.

1. ಒಂದು ದಿನ ಪೀಟರ್ ಅಂಕಲ್ ₹ 650 ಸಂಪಾದಿಸಿದರು. ಮರುದಿನ ಅವರು ಇನ್ನೂ ₹ 250 ಗಳಿಸಿದರು. ಎರಡನೇ ದಿನಕ್ಕೆ ಎಷ್ಟು ಹಣ ಸಂಪಾದಿಸಿದ್ದರು?

2. ರೀನಾ ₹ 209 ಕ್ಕೆ ದಿನಸಿ ಖರೀದಿಸಿದಳು. ಅವಳು ಪೀಟರ್ ಅಂಕಲ್‌ಗೆ ₹ 500 ನೋಟ್ ಕೊಟ್ಟಳು. ಪೀಟರ್ ಅಂಕಲ್ ರೀನಾಗೆ ಎಷ್ಟು ಹಣವನ್ನು ಹಿಂದಿರುಗಿಸಬೇಕು?

3. ಶಿರೀನ್‌ಳ ಹುಂಡಿಯಲ್ಲಿ ₹ 150 ಇದೆ. ಅವಳು ತನ್ನ ಹುಂಡಿಯಲ್ಲಿ ಪ್ರತಿವಾರ ₹ 100 ಹಾಕುತ್ತಾಳೆ. ನಾಲ್ಕು ವಾರಗಳ ಕೊನೆಯಲ್ಲಿ ಅವಳ ಬಳಿ ಎಷ್ಟು ಹಣವಿರುತ್ತದೆ?



4. ಪೀಟರ್ ಅಂಕಲ್ ಮೊದಲನೇ ತಿಂಗಳು ₹ 250, ಎರಡನೇ ತಿಂಗಳು ₹ 125 ಮತ್ತು ಮೂರನೇ ತಿಂಗಳು ₹ 350 ಉಳಿಸಿದರು. ಈ ಮೂರು ತಿಂಗಳಲ್ಲಿ ಅವರು ಎಷ್ಟು ಉಳಿತಾಯ ಮಾಡಿದ್ದಾರೆ?

ಉತ್ತರಗಳನ್ನು ಸಮೀಪದ ನೂರಕ್ಕೆ ಅಂದಾಜು ಮಾಡಿ. ತರಗತಿಯಲ್ಲಿ ನಿಮ್ಮ ಆಲೋಚನೆಗಳನ್ನು ಹಂಚಿಕೊಳ್ಳಿ.

ಸಂಖ್ಯಾ ವಾಕ್ಯ	ಸಮೀಪದ ನೂರು
156 + 34	
125 – 15	
105 + 195	
205 + 215	
500 – 395	
765 – 567	
505 + 405	



ಶಿಕ್ಷಕರ ಟಿಪ್ಪಣಿ: ಮಕ್ಕಳಿಗೆ ಸಂಖ್ಯೆಗಳನ್ನು ಕೂಡುವ ಮತ್ತು ಕಳೆಯುವ ಅಭ್ಯಾಸವನ್ನು ಮಾಡಿಸಲು ಶಿಕ್ಷಕರು ಇದೇ ರೀತಿಯ ಪದ ಸಮಸ್ಯೆಗಳನ್ನು ರಚಿಸಬಹುದು. ಪರಿಹರಿಸುವ ಮೊದಲು ಸಮಸ್ಯೆಯನ್ನು ಚಿತ್ರಿಸಲು ಮಕ್ಕಳನ್ನು ಪ್ರೇರೇಪಿಸಿ. ಪದ ಸಮಸ್ಯೆಗಳನ್ನು ಪರಿಹರಿಸಲು ಮಕ್ಕಳಿಗೆ ಪ್ರಮುಖ ಪದವ(key word)ಗಳನ್ನು ನೀಡುವುದನ್ನು ತಪ್ಪಿಸಿ.


ಪ್ರತಿ ಸಾಲಿನಲ್ಲಿ ನೀಡಿರುವ ಹೇಳಿಕೆ ಸಮಸ್ಯೆಗಳನ್ನು ಲೆಕ್ಕಾಚಾರ ಮಾಡದೆ ಹೋಲಿಕೆ ಮಾಡಿ. ಹೆಚ್ಚು ಇರುವುದಕ್ಕೆ ವೃತ್ತ ಹಾಕಿ. ತರಗತಿಯಲ್ಲಿ ನಿಮ್ಮ ಆಲೋಚನೆಗಳನ್ನು ಹಂಚಿಕೊಳ್ಳಿ.

373 + 23	—	373 + 40
240 + 10	—	204 + 10
900 + 9	—	890 + 60
345 – 45	—	345 – 54
800 – 8	—	700 – 8

ಸಮವಿರುವ ಜೋಡಿಗಳನ್ನು ಕಂಡುಹಿಡಿಯಿರಿ. ತರಗತಿಯಲ್ಲಿ ನಿಮ್ಮ ಆಲೋಚನೆಗಳನ್ನು ಹಂಚಿಕೊಳ್ಳಿ.

516 + 100	615 – 200	350 + 50
400 + 15	450 – 50	816 – 200

ಸೂಕ್ತವಾದ ಸಂಖ್ಯೆಗಳಿಂದ ಬಾಕ್ಸ್‌ಗಳನ್ನು ಭರ್ತಿಮಾಡಿ.





ಶಿಕ್ಷಕರ ಟಿಪ್ಪಣಿ: ಮೇಲಿನ ಸಮಸ್ಯೆಗಳನ್ನು ಪರಿಹರಿಸಲು ತರಗತಿಯಲ್ಲಿ ಮಾನಸಿಕ ಲೆಕ್ಕಾಚಾರಗಳನ್ನು ಮಾಡಲು ಪ್ರೋತ್ಸಾಹಿಸಿ. ಮಕ್ಕಳಿಗೆ ಇಂತಹ ಹಲವು ಪ್ರಶ್ನೆಗಳನ್ನು ರೂಪಿಸಲು ಹೇಳಿ.

0–5 ರ ವರೆಗಿನ ಸಂಖ್ಯೆಗಳನ್ನು ಬಳಸಿ ಕಾರ್ಡ್‌ಗಳನ್ನು ಮಾಡಿ. ಈ ಕಾರ್ಡ್‌ಗಳನ್ನು ಬಳಸಿಕೊಂಡು 3–ಅಂಕಿಯ ಎರಡು ಸಂಖ್ಯೆಗಳನ್ನು ಮಾಡಿ. ಎರಡು ಸಂಖ್ಯೆಗಳನ್ನು ಕೂಡಿ ಮತ್ತು ಎರಡು ಸಂಖ್ಯೆಗಳನ್ನು ಕಳೆಯಿರಿ. ಕಾರ್ಡ್‌ಗಳನ್ನು ಮರು ಜೋಡಿಸಿ ದೊಡ್ಡ ಮೊತ್ತವನ್ನು ಪಡೆಯಲು ಪ್ರಯತ್ನಿಸಿ. ಕಾರ್ಡ್‌ಗಳನ್ನು ಮರು ಜೋಡಿಸಿ ಚಿಕ್ಕ ವ್ಯತ್ಯಾಸವನ್ನು ಪಡೆಯಲು ಪ್ರಯತ್ನಿಸಿ.

ಅತ್ಯಂತ ದೊಡ್ಡ ಮೊತ್ತ ಮತ್ತು ಅತ್ಯಂತ ಚಿಕ್ಕ ವ್ಯತ್ಯಾಸವನ್ನು ಪಡೆದಿರುವ ನಿಮ್ಮ ಸ್ನೇಹಿತರೊಂದಿಗೆ, ಪರಿಶೀಲಿಸಿ.





ನಾವು ಮಾಡೋಣ

(a) 265 + 9

(b) 405 + 56

(c) 825 + 175

(d) 600 – 82

(e) 568 – 5

(f) 653 – 356




ಶಿಕ್ಷಕರ ಟಿಪ್ಪಣಿ: ಮಕ್ಕಳು ಪುಸ್ತಕದಲ್ಲಿರುವ ಸಂಖ್ಯಾ ಕಾರ್ಡ್‌ಗಳನ್ನು ಬಳಸಿಕೊಂಡು ಬೇರೆ ಬೇರೆ ಸಂಖ್ಯೆಗಳನ್ನು ರಚಿಸಲು ಅನುಮತಿ ನೀಡಿ. ಮಕ್ಕಳಿಗೆ ಪೆನ್ಸಿಲ್ ಮತ್ತು ಕಾಗದದಿಂದ ಮಾತ್ರ ಈ ಕೆಲಸವನ್ನು ಮಾಡುವುದು ಕಷ್ಟಕರವಾಗಿರುತ್ತದೆ.

13 ಸಮಯ ಸಾಗುತ್ತದೆ

H7F7Z6







ಅಪ್ಪ ಹೊಸ ಕ್ಯಾಲೆಂಡರ್ ತಂದರು,
ಅಮ್ಮ ದೊಡ್ಡ ಪ್ರಮಾದವನ್ನು ತೋರಿಸುತ್ತಾರೆ.
ಜುಲೈ ತಿಂಗಳು ಕಾಣೆಯಾಗಿದೆ,
ಅದು ಎಲ್ಲಿ ಹಾರಿತು? ನನಗೆ ಆಶ್ಚರ್ಯವಾಗುತ್ತಿದೆ.
ಚಿಂತಿಸಬೇಡ, ಚಿಂತಿಸಬೇಡ,
ನಿನ್ನ ಪ್ರಶ್ನೆಗೆ ನನ್ನ ಬಳಿ ಪರಿಹಾರವಿದೆ.
ಜುಲೈ ಮತ್ತು ಜನವರಿ ಒಂದೇ ರೀತಿ ಕಾಣುತ್ತವೆ,
ನಾವು ಕ್ಯಾಲೆಂಡರ್ ಆಟವನ್ನು ಆಡೋಣ.



ನಾವು ಮಾಡೋಣ

ಜುಲೈ 2024 ತಿಂಗಳ ಕ್ಯಾಲೆಂಡರ್ ತಯಾರಿಸಿ.

ಜುಲೈ

ಸೋಮವಾರ	ಮಂಗಳವಾರ	ಬುಧವಾರ	ಗುರುವಾರ	ಶುಕ್ರವಾರ	ಶನಿವಾರ	ಭಾನುವಾರ

ಜುಲೈ ತಿಂಗಳನ್ನು ಗಮನಿಸಿ. ಮುಂದಿನವುಗಳನ್ನು ಪೂರ್ಣಗೊಳಿಸಿ.

1. ಭಾನುವಾರಗಳ ಸಂಖ್ಯೆ _____
2. ಈ ತಿಂಗಳಲ್ಲಿ ಗುರುವಾರದ ದಿನಾಂಕಗಳನ್ನು ಬರೆಯಿರಿ _____
3. ಜುಲೈ 22 ರ ಮೂರು ದಿನಗಳ ನಂತರ ಜುಲೈ _____ ಆಗಿರುತ್ತದೆ. ಈ ದಿನಾಂಕದ ದಿನ _____
4. ಒಂದು ಶಾಲೆಯು ಜುಲೈ 7 ರಿಂದ 15 ದಿನಗಳವರೆಗೆ ಮುಚ್ಚಲ್ಪಡುತ್ತದೆ. ಶಾಲೆಯು ತೆರೆಯುವ ದಿನಾಂಕ _____



ನಾವು ಅನ್ವೇಷಿಸೋಣ

ಹಿಂದಿನ ಎರಡು ವರ್ಷಗಳ ಕ್ಯಾಲೆಂಡರ್‌ಗಳನ್ನು ಸಂಗ್ರಹಿಸಿ. ಎರಡೂ ಕ್ಯಾಲೆಂಡರ್‌ಗಳಲ್ಲಿ ಮುಂದಿನವುಗಳನ್ನು ಗಮನಿಸಿ:

1. ಯಾವುದು ಅದೇ ಇದೆ? ವರ್ಷಗಳಲ್ಲಿ ಯಾವುದು ಬದಲಾಗುತ್ತದೆ? ಸರಿಯಾದ ಉತ್ತರಕ್ಕೆ ✓ ಗುರುತು ಹಾಕಿ.

(a) ತಿಂಗಳುಗಳ ಹೆಸರುಗಳು — ಬದಲಾಗುತ್ತದೆ / ಬದಲಾಗುವುದಿಲ್ಲ.

(b) ಒಂದು ತಿಂಗಳಿನಲ್ಲಿರುವ ದಿನಗಳು — ಬದಲಾಗುತ್ತದೆ / ಬದಲಾಗುವುದಿಲ್ಲ.

(c) ಒಂದು ವಾರದಲ್ಲಿರುವ ದಿನಗಳು — ಬದಲಾಗುತ್ತದೆ / ಬದಲಾಗುವುದಿಲ್ಲ.

(d) ಭಾನುವಾರಗಳ ಸಂಖ್ಯೆ — ಬದಲಾಗುತ್ತದೆ / ಬದಲಾಗುವುದಿಲ್ಲ.

(e) ಒಂದು ವರ್ಷದಲ್ಲಿರುವ ವಾರಗಳ ಸಂಖ್ಯೆ — ಬದಲಾಗುತ್ತದೆ / ಬದಲಾಗುವುದಿಲ್ಲ.

ಹಬ್ಬ	ದಿನಾಂಕ ತಿಂಗಳು ವರ್ಷ ದಿ/ತಿಂ/ವ _____	ದಿನಾಂಕ ತಿಂಗಳು ವರ್ಷ ದಿ/ತಿಂ/ವ _____	ಹಬ್ಬ	ದಿನಾಂಕ ತಿಂಗಳು ವರ್ಷ ದಿ/ತಿಂ/ವ	ದಿನಾಂಕ ತಿಂಗಳು ವರ್ಷ ದಿ/ತಿಂ/ವ
ದೀಪಾವಳಿ			ಮಕರ ಸಂಕ್ರಾಂತಿ		
ಗಣೇಶ ಚತುರ್ಥಿ			ಮಹಾವೀರ ಜಯಂತಿ		
ಈದ್–ಉಲ್–ಫಿತರ್			ಸ್ವಾತಂತ್ರ್ಯ ದಿನಾಚರಣೆ		
ದಸರಾ			ಗುರುಪೂರ್ಣಿಮ		
ಬುದ್ಧ ಪೂರ್ಣಿಮ			ಗಣರಾಜ್ಯೋತ್ಸವ		
ಕ್ರಿಸ್‌ಮಸ್			ನಿಮ್ಮ ಜನ್ಮದಿನ		

ಒಂದೇ ದಿನಾಂಕದಂದು ಬರುವ ಹಬ್ಬಗಳಿಗೆ ವೃತ್ತ ಹಾಕಿ.

ನಾವು ಮಾಡೋಣ

1. ಒಂದು ವರ್ಷದಲ್ಲಿನ 12 ತಿಂಗಳುಗಳ ಹೆಸರುಗಳನ್ನು ಬರೆಯಿರಿ.
2. 30 ದಿನಗಳಿಗಿಂತ ಕಡಿಮೆ ಇರುವ ತಿಂಗಳುಗಳು _____
3. ಒಂದು ವರ್ಷದಲ್ಲಿರುವ ದಿನಗಳ ಸಂಖ್ಯೆ _____
4. ಒಂದು ವರ್ಷದಲ್ಲಿ 53 ವಾರಗಳಿವೆ ಎಂದು ಹೀತಲ್ ಹೇಳುತ್ತಾಳೆ. ಅವಳ ಹೇಳಿಕೆ ಸರಿಯೇ? ಹೌದು / ಇಲ್ಲ. ಇಲ್ಲದಿದ್ದರೆ, ಒಂದು ವರ್ಷದಲ್ಲಿ ಎಷ್ಟು ವಾರಗಳಿವೆ ಎಂದು ನೀವು ಕಂಡುಕೊಂಡಿದ್ದೀರಿ?

ವಯಸ್ಸು–ವಿನೋದ

ನಿಮ್ಮ ತಾಯಿಯೊಂದಿಗೆ ಮಾತನಾಡಿ ಮುಂದಿನವುಗಳನ್ನು ಕಂಡುಹಿಡಿಯಿರಿ.



ಹೀತಲ್‌ನ ವಯಸ್ಸು ತನ್ನ ಸಹೋದರನ ವಯಸ್ಸಿನ ಎರಡರಷ್ಟಿದೆ. ಅವಳು ತನ್ನ ಸಹೋದರನಿಗಿಂತ 10 ವರ್ಷ ದೊಡ್ಡವಳು. ಹೀತಲ್ ಮತ್ತು ಅವಳ ಸಹೋದರನ ವಯಸ್ಸನ್ನು ಊಹಿಸಿ.



ಶಿಕ್ಷಕರ ಟಿಪ್ಪಣಿ: ವಿವಿಧ ಜನರ ವಯಸ್ಸನ್ನು ಕಂಡುಹಿಡಿಯಲು ಅವರು ಬಳಸಿದ ತಂತ್ರಗಳನ್ನು ಮಕ್ಕಳೊಂದಿಗೆ ಚರ್ಚಿಸಿ.



ನಾವು ಮಾಡೋಣ



ನಮೂನೆ ಸಂಖ್ಯೆ 5
ಕೇರಳ ಸರ್ಕಾರ

BIRTH CERTIFICATE

ಜನನ ಪ್ರಮಾಣ ಪತ್ರ

ಈ ಮಾಹಿತಿಯನ್ನು, ಕೊಟ್ಟಾಯಂ ಪಂಚಾಯತ್‌ನ 2015ರ ರಿಜಿಸ್ಟರ್‌ನಲ್ಲಿರುವ ಜನನದ ಮೂಲ ದಾಖಲೆಯಿಂದ ತೆಗೆದುಕೊಳ್ಳಲಾಗಿದೆ ಎಂದು ಪ್ರಮಾಣೀಕರಿಸಿದೆ.

ಹೆಸರು:	ಬಿನ್ಸಿ ಥಾಮಸ್ ಜಾಕೋಬ್
ಲಿಂಗ:	ಹೆಣ್ಣು
ಹುಟ್ಟಿದ ದಿನಾಂಕ:	02/05/2015 (ಎರಡನೇ ಮೇ ಎರಡು ಸಾವಿರದ ಹದಿನೈದು)
ಹುಟ್ಟಿದ ಸ್ಥಳ:	ಕಡಂಪುಳ ಆಸ್ಪತ್ರೆ
ತಂದೆಯ ಹೆಸರು:	ಜಾಕೋಬ್ ತಾರಕನ್
ತಾಯಿಯ ಹೆಸರು:	ಲಾರಾ ಥಾಮಸ್
ನೋಂದಣಿ ದಿನಾಂಕ:	02/05/2015
ನೋಂದಣಿ ಸಂಖ್ಯೆ:	815/15

ದಿನಾಂಕ 18.05.2015 ಅಧಿಕೃತ ಸಹಿ

ಬಿನ್ಸಿಯ ಜನನ ಪ್ರಮಾಣ ಪತ್ರವನ್ನು ಗಮನಿಸಿ ಮುಂದಿನ ಪ್ರಶ್ನೆಗಳಿಗೆ ಉತ್ತರಿಸಿ.

1. ಬಿನ್ಸಿ 2015ರ (ಏಪ್ರಿಲ್/ಮೇ/ಜೂನ್/ಜುಲೈ) 2 ರಂದು ಜನಿಸಿದರು ಎಂದು 2/5/2015 ತೋರಿಸುತ್ತದೆ.
2. 2025ರ ಮೇ 2 ರಂದು ಬಿನ್ಸಿಯ ವಯಸ್ಸು ಎಷ್ಟಾಗಿರುತ್ತದೆ?
3. 2030ಕ್ಕೆ ಅವಳ ವಯಸ್ಸು ಎಷ್ಟಾಗಿರುತ್ತದೆ?
4. ಬಿನ್ಸಿಯ ಎಂಟನೇ ಜನ್ಮದಿನವು ..... ರಂದು ಇತ್ತು.
5. 2015ರ ಆಗಸ್ಟ್ 2 ರಂದು ಬಿನ್ಸಿಯ ವಯಸ್ಸು ..... ತಿಂಗಳು.
6. ಆಕೆಯ ಜನನದ ಎಷ್ಟು ದಿನಗಳ ನಂತರ ಪ್ರಮಾಣಪತ್ರವನ್ನು ನೀಡಲಾಯಿತು? .....



ನಾವು ಮಾಡೋಣ

1. ನಿಮ್ಮ ಜನನ ಪ್ರಮಾಣ ಪತ್ರವನ್ನು ತಯಾರಿಸಿ.

ನಮೂನೆ ಸಂಖ್ಯೆ _____

_____ ಸರ್ಕಾರ

BIRTH CERTIFICATE
ಜನನ ಪ್ರಮಾಣ ಪತ್ರ

ಈ ಮಾಹಿತಿಯನ್ನು _____ವರ್ಷದ ಮತ್ತು _____ ರಿಜಿಸ್ಟರ್‌ನಲ್ಲಿರುವ ಜನನದ ಮೂಲ ದಾಖಲೆಯಿಂದ ತೆಗೆದುಕೊಳ್ಳಲಾಗಿದೆ ಎಂದು ಪ್ರಮಾಣೀಕರಿಸಿದೆ.

ಹೆಸರು: _____

ಲಿಂಗ: _____

ಹುಟ್ಟಿದ ದಿನಾಂಕ: _____

ಹುಟ್ಟಿದ ಸ್ಥಳ: _____

ತಂದೆಯ ಹೆಸರು: _____

ತಾಯಿಯ ಹೆಸರು: _____

ಪ್ರಮಾಣಪತ್ರ ತಯಾರಿಸಿದ ದಿನಾಂಕ: _____

ಪ್ರಮಾಣಪತ್ರ ಬರೆದ ದಿನಾಂಕದಂದು ವಯಸ್ಸು: _____

_____ ನಿಮ್ಮ ಸಹಿ


2. ನೀಡಿರುವ ಬಾಕ್ಸ್‌ಗಳಲ್ಲಿ ದಿನಾಂಕಗಳನ್ನು ಬರೆಯುವ ಮೂಲಕ ಮುಂದಿನವುಗಳನ್ನು ಪೂರ್ಣಗೊಳಿಸಿ:

ಜನ್ಮ ದಿನಾಂಕ	ನೀವು ಶಾಲೆಗೆ ದಾಖಲಾದ ದಿನಾಂಕ	ನೀವು 1ನೇ ತರಗತಿಗೆ ದಾಖಲಾದ ದಿನಾಂಕ	ನೀವು 3ನೇ ತರಗತಿಗೆ ದಾಖಲಾದ ದಿನಾಂಕ



ನಾವು ಆಡೋಣ

ಸುಸ್ಥಿತಿಯಲ್ಲಿರುವ ಗಡಿಯಾರ ಅಥವಾ ಕೈ ಗಡಿಯಾರವನ್ನು ತೆಗೆದುಕೊಳ್ಳಿ. ಗಡಿಯಾರದ ಮುಖ ಮತ್ತು ಮುಳ್ಳುಗಳ ಚಲನೆಯನ್ನು ಗಮನಿಸಿ. ನೀವು ಗಮನಿಸುವುದನ್ನು ಚರ್ಚಿಸಿ.







ನಾವು ಮಾಡೋಣ

1. ಹೀತಲ್ ತನ್ನ ಉಪಹಾರವನ್ನು ಬೆಳಗ್ಗೆ 7 ಗಂಟೆಗೆ ಪ್ರಾರಂಭಿಸಿದಳು. ಅವಳು ಬೆಳಗ್ಗೆ 07.15 ಕ್ಕೆ ತನ್ನ ಉಪಹಾರವನ್ನು ಮುಗಿಸಿದಳು.

(a) 07:00




(b) 07:15




ಅವಳು ಉಪಹಾರವನ್ನು ಸೇವಿಸಲು _____ನಿಮಿಷಗಳನ್ನು ತೆಗೆದುಕೊಂಡಳು. ನಿನಗೆ ಹೇಗೆ ತಿಳಿಯಿತು?

2. ಮುಂದಿನವುಗಳನ್ನು ತೋರಿಸಲು ಗಡಿಯಾರದ ಮೇಲೆ ಗಂಟೆಯ ಮುಳ್ಳು ಮತ್ತು ನಿಮಿಷದ ಮುಳ್ಳನ್ನು ರಚಿಸಿ:

(a) 8:15 ಅಥವಾ 8 ಗಂಟೆ 15 ನಿಮಿಷ (8 ಕಾಲು)



(a) 8:30 ಅಥವಾ 8 ಗಂಟೆ 30 ನಿಮಿಷ (8 ವರೆ)






ಶಿಕ್ಷಕರ ಟಿಪ್ಪಣಿ: ಗಡಿಯಾರದ ಮೇಲಿನ ಸಂಖ್ಯೆಗಳು ಮತ್ತು ಗುರುತುಗಳ ಅರ್ಥವೇನೆಂದು ಮಕ್ಕಳೊಂದಿಗೆ ಚರ್ಚಿಸಿ. ಗಡಿಯಾರವನ್ನು ಬಳಸಿಕೊಂಡು ಗಂಟೆಗಳು ಮತ್ತು ನಿಮಿಷಗಳ ಅವಧಿಯನ್ನು ಅಳೆಯುವ ಪ್ರಕ್ರಿಯೆಯನ್ನು ಸಹ ಚರ್ಚಿಸಿ.


Let us Do
ನಾವು ಮಾಡೋಣ

ಹೀತಲ್ ಜೀವನದಲ್ಲಿ ಒಂದು ದಿನ.

ಚಿತ್ರದಲ್ಲಿ ತೋರಿಸಿರುವ ಹೇಳಿಕೆಯೊಂದಿಗೆ ಚಟುವಟಿಕೆಯನ್ನು ಹೊಂದಿಸಿ. ಸಮಯವನ್ನು ಬರೆದು, ಅಗತ್ಯವಿರುವ ಕಡೆ ನಿಮಿಷದ ಮುಳ್ಳು ಮತ್ತು ಗಂಟೆ ಮುಳ್ಳನ್ನು ರಚಿಸಿ.



ಅಜ್ಜಿಯ ಮನೆಗೆ ಭೇಟಿ


ನೀವು ಮೊದಲು ಹೆಣೆಯುತ್ತಿದ್ದ ಸ್ವೆಟರ್ ಇದೇನಾ?
ಹೌದು, ಇದಕ್ಕೆ ನನಗೆ ಎರಡು ತಿಂಗಳು ಬೇಕಾಯಿತು. ಈಗ ಇದು ನಿನಗಾಗಿ ಬಹುತೇಕ ಸಿದ್ಧವಾಗಿದೆ.
ಈ ತರಕಾರಿಗಳು ಬೆಳೆಯಲು ಎಷ್ಟು ಸಮಯ ತೆಗೆದುಕೊಳ್ಳುತ್ತವೆ?
ವಿವಿಧ ತರಕಾರಿ ಬೀಜಗಳು ಬೆಳೆಯಲು ವಿಭಿನ್ನ ಸಮಯಗಳನ್ನು ತೆಗೆದುಕೊಳ್ಳುತ್ತವೆ. ಮೂಲಂಗಿ 2–3 ವಾರಗಳನ್ನು ತೆಗೆದುಕೊಳ್ಳುತ್ತದೆ; ಎಲೆಕೋಸು, ಕ್ಯಾಪ್ಸಿಕಂ, ಕ್ಯಾರೆಟ್, ಹೂಕೋಸು ಇತ್ಯಾದಿಗಳು 2–3 ತಿಂಗಳು ತೆಗೆದುಕೊಳ್ಳಬಹುದು.



ನಾವು ಯೋಚಿಸೋಣ

ನಿಮ್ಮ ದೈನಂದಿನ ಜೀವನದಲ್ಲಿ, ಮುಂದಿನ ಅವಧಿಗಳನ್ನು ತೆಗೆದುಕೊಳ್ಳಬಹುದಾದ ಘಟನೆಗಳು ಅಥವಾ ಚಟುವಟಿಕೆಗಳನ್ನು ಬರೆಯುವ ಮೂಲಕ ಕೋಷ್ಟಕವನ್ನು ಭರ್ತಿ ಮಾಡಿ. ಪ್ರತಿ ಅಂಕಣದಲ್ಲಿ ಒಂದನ್ನು ಉದಾಹರಣೆಯಾಗಿ ಬರೆಯಲಾಗಿದೆ.

ತಿಂಗಳುಗಳನ್ನು ತೆಗೆದುಕೊಳ್ಳುತ್ತದೆ	ವಾರಗಳನ್ನು ತೆಗೆದುಕೊಳ್ಳುತ್ತದೆ	ದಿನಗಳನ್ನು ತೆಗೆದುಕೊಳ್ಳುತ್ತದೆ	ಗಂಟೆಗಳನ್ನು ತೆಗೆದುಕೊಳ್ಳುತ್ತದೆ	ನಿಮಿಷಗಳನ್ನು ತೆಗೆದುಕೊಳ್ಳುತ್ತದೆ
ಬೇಸಿಗೆಯಿಂದ ಚಳಿಗಾಲಕ್ಕೆ ಬದಲಾಗುವುದು	ತರಗತಿಯಲ್ಲಿ ಒಂದು ಅಧ್ಯಾಯವನ್ನು ಪೂರ್ಣಗೊಳಿಸುವುದು	ಒಂದು ಸ್ವೆಟರ್ ಹೆಣೆಯುವುದು	ಒಂದು ಶರ್ಟ್ ಹೊಲಿಯುವುದು	ಸ್ನಾನ ಮಾಡುವುದು



ಶಿಕ್ಷಕರ ಟಿಪ್ಪಣಿ: ನಿಮಿಷಗಳು, ಗಂಟೆಗಳು, ದಿನಗಳು ಅಥವಾ ತಿಂಗಳುಗಳನ್ನು ತೆಗೆದುಕೊಳ್ಳುವ ಬೇರೆ ಬೇರೆ ಘಟನೆಗಳ ಕಡೆಗೆ ಮಗುವಿನ ಗಮನವನ್ನು ತನ್ನಿ.

3. ಮುಂದಿನ ಚಟುವಟಿಕೆಗಳಿಗೆ ತೆಗೆದುಕೊಂಡ ನಿಮಿಷಗಳ ಸಂಖ್ಯೆಯನ್ನು ಬರೆಯಿರಿ.







ಚಟುವಟಿಕೆ	ತೆಗೆದುಕೊಳ್ಳುವ ಸಮಯ
ಶಾಲಾ ಅವಧಿ	_____ ನಿಮಿಷಗಳು
ಊಟದ ವಿರಾಮ	_____ ನಿಮಿಷಗಳು
ಮಧ್ಯಾಹ್ನದ ಊಟ	_____ ನಿಮಿಷಗಳು
ಆಟದ ಅವಧಿ	_____ ನಿಮಿಷಗಳು
ರಾತ್ರಿಯ ಊಟ	_____ ನಿಮಿಷಗಳು
ಹಲ್ಲುಗಳನ್ನು ಉಜ್ಜುವುದು	_____ ನಿಮಿಷಗಳು


4. ಮುಂದೆ ನೀಡಲಾದ ಸಮಯದ ಚೌಕಟ್ಟಿನಲ್ಲಿ ನೀವು ಏನು ಮಾಡಬಹುದು, ಬರೆಯಿರಿ.

ಸಮಯ	ಸಮಯ
5 ನಿಮಿಷಗಳು	
10 ನಿಮಿಷಗಳು	
15 ನಿಮಿಷಗಳು	
20 ನಿಮಿಷಗಳು	

25 ನಿಮಿಷಗಳು	
30 ನಿಮಿಷಗಳು	
45 ನಿಮಿಷಗಳು	
60 ನಿಮಿಷಗಳು	

5. ನಿಮಿಷ ಮತ್ತು ಗಂಟೆಯ ಮುಳ್ಳುಗಳ ಚಲನೆಯನ್ನು ಗಮನಿಸುವ ಮೂಲಕ ಗತಿಸಿದ ನಿಮಿಷಗಳ ಸಂಖ್ಯೆಯನ್ನು ಬರೆಯಿರಿ.

ಆರಂಭದ ಸಮಯ	ಅಂತಿಮ ಸಮಯ	ತೆಗೆದುಕೊಂಡ ಸಮಯ
		5 ನಿಮಿಷಗಳು
		
		





ನಾವು ಅನ್ವೇಷಿಸೋಣ

ನೀವು ವಿವಿಧ ಸ್ಥಳಗಳಲ್ಲಿ ಡಿಜಿಟಲ್ ವಾಚ್‌ಗಳು ಅಥವಾ ಗಡಿಯಾರಗಳನ್ನು ನೋಡಿರಬಹುದು. ನೀವು ಅವುಗಳನ್ನು ಎಲ್ಲಿ ನೋಡಿದ್ದೀರಿ?





ಡಿಜಿಟಲ್ ಗಡಿಯಾರವು ಅಂಕಿಗಳನ್ನು ಬಳಸಿಕೊಂಡು ಸಮಯವನ್ನು ತೋರಿಸುತ್ತದೆ. ಸೆಕೆಂಡ್, ನಿಮಿಷ ಮತ್ತು ಗಂಟೆಯ ಮುಳ್ಳುಗಳೊಂದಿಗೆ ಸಮಯವನ್ನು ತೋರಿಸುವ ಗಡಿಯಾರವನ್ನು **ಅನಲಾಗ್** ಗಡಿಯಾರ ಎಂದು ಕರೆಯುತ್ತಾರೆ.

1. ಮೇಲಿನ ಎರಡು ಗಡಿಯಾರಗಳ ವ್ಯತ್ಯಾಸವೇನು?


2. ನಿಮ್ಮ ಶಾಲೆಯ ಗೋಡೆಯ ಮೇಲೆ ಯಾವ ಗಡಿಯಾರವಿದೆ?

ಸಮಯದ ಅವಧಿಯನ್ನು ಮರಳಿನ ಗಡಿಯಾರಗಳನ್ನೂ ಬಳಸಿ ಅಳೆಯಲಾಗುತ್ತದೆ. ಹಿರಿಯರ ಉಪಸ್ಥಿತಿಯಲ್ಲಿ ನಿಮ್ಮ ಸ್ವಂತ ಮರಳು ಗಡಿಯಾರವನ್ನು (ಟೈಮರ್) ಮಾಡಿ.

ಅಗತ್ಯವಿರುವ ಸಾಮಗ್ರಿಗಳು:

(i) ನಿರುಪಯುಕ್ತ ಪಾರದರ್ಶಕ ಅಥವಾ ಸಣ್ಣ ಗಾತ್ರದ ಮುಚ್ಚಳಗಳನ್ನು ಹೊಂದಿರುವ ಎರಡು ಗಾಜಿನ ಬಾಟಲ್‌ಗಳು.

(ii) ಬಾಟಲ್‌ಗಳ ಮುಚ್ಚಳಗಳನ್ನು ಸೇರಿಸಲು ಉತ್ತಮ ಅಂಟು.



ಪ್ರಕ್ರಿಯೆ:

ಉತ್ತಮವಾದ ಅಂಟು ಬಳಸಿ ಬಾಟಲ್ ಮುಚ್ಚಳಗಳ ಮೇಲ್ಭಾಗವನ್ನು ಪರಸ್ಪರ ಸೇರಿಸಿ.

ಸೇರಿಸಿದ ಮುಚ್ಚಳಗಳ ಮಧ್ಯದಲ್ಲಿ ಮೊನಚಾದ ಸೂಜಿಯಿಂದ ಸಣ್ಣ ರಂಧ್ರವನ್ನು ಮಾಡಿ.

ಒಂದು ಬಾಟಲ್‌ನ ಅರ್ಧದಷ್ಟಕ್ಕೆ ಉತ್ತಮ ಮರಳು ತುಂಬಿ ಮತ್ತು ಸೇರಿಸಲಾದ ಮುಚ್ಚಳಗಳಿಂದ ಬಾಟಲ್ ಮುಟ್ಟಿ.

ಸೇರಿಸಿದ ಮುಚ್ಚಳಗಳ ಇನ್ನೊಂದು ಬದಿಯಲ್ಲಿ ಎರಡನೇ ಬಾಟಲ್ ಜೋಡಿಸಿ.

ಮರಳು ಒಂದು ಬಾಟಲ್‌ನಿಂದ ಎರಡನೆಯದಕ್ಕೆ ಸ್ಥಳಾಂತರವಾಗಲು ಎಷ್ಟು ಸಮಯ ತೆಗೆದುಕೊಳ್ಳುತ್ತದೆ ಎಂಬುದನ್ನು ಗಡಿಯಾರ ಬಳಸಿ ಕಂಡುಹಿಡಿಯಿರಿ. ನಿಮ್ಮ ಮರಳು ಗಡಿಯಾರ, ಬಳಕೆಗೆ ಸಿದ್ಧವಾಗಿದೆ. ವಿವಿಧ ಆಟಗಳನ್ನು ಆಡುವಾಗ ಸಮಯ ತಿಳಿಯಲು, ನೀವು ಅದನ್ನು ಬಳಸಬಹುದು.

14 ಸೂರಜ್‌ಕುಂಡ್ ಜಾತ್ರೆ



ಸೋನಿ ಮತ್ತು ಅವಿ ತಮ್ಮ ಅಜ್ಜ ಅಜ್ಜಿಯೊಂದಿಗೆ ಜಾತ್ರೆಯನ್ನು ನೋಡಲು ಹೋಗುತ್ತಿದ್ದಾರೆ. ಅವರು ಹರಿಯಾಣದ ಫರೀದಾಬಾದ್ ಜಿಲ್ಲೆಯ ಸೂರಜ್ ಕುಂಡ್‌ಗೆ ಹೋಗುತ್ತಿದ್ದಾರೆ. ನಾವು ಅವರೊಂದಿಗೆ ಸೇರಿ ಆನಂದಿಸೋಣ.





ನಾವು ಚರ್ಚಿಸೋಣ


1. ಚಿತ್ರದಲ್ಲಿ ನೀವು ಏನು ಕಾಣುತ್ತೀರಿ?
2. ಚಿತ್ರದಲ್ಲಿ ಎಡ ಮತ್ತು ಬಲ ಬದಿಯಿಂದ ಒಂದೇ ರೀತಿ ಕಾಣುವ ವಸ್ತುಗಳನ್ನು ಗುರುತಿಸಿ.



ಶಿಕ್ಷಕರ ಟಿಪ್ಪಣಿ: ಮಕ್ಕಳು ಭೇಟಿ ನೀಡಿದ ಯಾವುದೇ ಸ್ಥಳೀಯ ಜಾತ್ರೆ(ಮೇಳ) ಬಗ್ಗೆ ಅವರೊಂದಿಗೆ ಚರ್ಚಿಸಿ. ಚಿತ್ರವನ್ನು ನೋಡಲು ಮತ್ತು ನೆಲದ ಮೇಲೆ ಟೈಲ್ಸ್ ಆಳವಡಿಸಿದ ಹಾಗೂ ವಸ್ತುಗಳು ಮತ್ತು ಆಕಾರಗಳಲ್ಲಿ ಅವರು ನೋಡುವ ಸಮಮಿತಿ ಮುಂತಾದ ವಿಭಿನ್ನ ವಿನ್ಯಾಸಗಳನ್ನು ಗಮನಿಸಲು ಅವರನ್ನು ಪ್ರೋತ್ಸಾಹಿಸಿ.

ಮಾಲೆಗಳನ್ನು ತಯಾರಿಸಿ


ಸೋನಿ ಮತ್ತು ಅವಿ ಒಂದು ಅಂಗಡಿಗೆ ಹೋಗುತ್ತಾರೆ. ಅಲ್ಲಿ ಒಬ್ಬ ಪುರುಷ ಮತ್ತು ಮಹಿಳೆ ಮಣಿಗಳಿಂದ ಮಾಲೆಗಳನ್ನು ತಯಾರಿಸುತ್ತಿದ್ದಾರೆ.





ನಾವು ಮಾಡೋಣ

1. ನೀವು ತಯಾರಿಸಿದ ಮಾಲೆಗಳನ್ನು ತೋರಿಸಲು, ಎರಡು ಬಣ್ಣಗಳನ್ನು (🔴🟡) ಬಳಸಿ ದಾರಗಳಲ್ಲಿನ ಮಣಿಗಳಿಗೆ ಬಣ್ಣ ಹಚ್ಚಿ.





ಶಿಕ್ಷಕರ ಟಿಪ್ಪಣಿ: ನೀವು ಮಕ್ಕಳಿಗೆ ಒಂದು ಮಣಿಹಾರದಿಂದ ಎರಡು ಬಣ್ಣಗಳ ದಾರ ಮತ್ತು 8 ಮಣಿಗಳನ್ನು ನೀಡಬಹುದು. ಇಲ್ಲಿ ನೀಡಿದ ಹಾರಗಳಿಗೆ ಬಣ್ಣ ಹಾಕುವ ಮೂಲಕ ಅವರು ತಮ್ಮ ರಚನೆಗಳ ದಾಖಲೀಕರಣ ಮಾಡಬಹುದು.



ನನ್ನ ಮಾಲೆಯ ಎರಡು ಭಾಗಗಳು ನಿಖರವಾಗಿ ಒಂದೇ ಆಗಿವೆ. ನನ್ನ ಮಾಲೆ ಸಮಮಿತೀಯವಾಗಿದೆ.


ನನ್ನ ಮಾಲೆಯ ಎರಡು ಭಾಗಗಳು ಒಂದೇ ಆಗಿಲ್ಲ. ನನ್ನ ಮಾಲೆ ಸಮಮಿತೀಯವಾಗಿಲ್ಲ.



2. ಹಿಂದಿನ ಪುಟದಲ್ಲಿ ಸಮಮಿತೀಯವಾಗಿರುವ ಮಾಲೆಗಳಿಗೆ ಗುರುತು ✓ ಮಾಡಿ.

3. ಅಂತಹ ಎಷ್ಟು ಮಾಲೆಗಳನ್ನು ಮಾಡಬಹುದು? ಚರ್ಚಿಸಿ.

a. ಸಮಮಿತೀಯವಾಗಿರುವ ಮಾಲೆಗಳಿಗೆ ✓ ಮಾಡಿ ಮತ್ತು ಸಮಮಿತೀಯವಲ್ಲದವುಗಳಿಗೆ ✗ ಗುರುತು ಮಾಡಿ.



b. ಈಗ, ಸಮಮಿತೀಯ ಮಾಲೆಗಳನ್ನು ತಯಾರಿಸಲು ಒಂದು ಬಣ್ಣದ 6 ಮಣಿಗಳನ್ನು ಮತ್ತು ಇನ್ನೊಂದು ಬಣ್ಣದ 2 ಮಣಿಗಳನ್ನು ಬಳಸಿ.






ಶಿಕ್ಷಕರ ಟಿಪ್ಪಣಿ: ಮಕ್ಕಳು ತಮ್ಮ ಸುತ್ತಲಿನ ಸಮಮಿತೀಯ ಮತ್ತು ಸಮಮಿತಿಯಲ್ಲದ ವಸ್ತುಗಳ ನಡುವಿನ ವ್ಯತ್ಯಾಸಗಳನ್ನು ಗಮನಿಸಲು ಪ್ರೋತ್ಸಾಹಿಸಿ. ಅವರ ಸಮರ್ಥನೆ ಮತ್ತು ಕಾರಣಗಳನ್ನು ಹಂಚಿಕೊಳ್ಳಲು ಅವರಿಗೆ ಅವಕಾಶಗಳನ್ನು ಒದಗಿಸಿ.






ನಮಸ್ಕಾರ ! ಸುತ್ತಲೂ ರಂಗೋಲಿಗಳು!

ಸೋನಿ ಮತ್ತು ಅವಿ ತಮಿಳುನಾಡಿನ ಅಂಗಡಿಗೆ ಬಂದರು. ಅಮ್ಮ ಗುಡಿಸಿಲಿನ ಮುಂದೆ ಕೊಲಂ (ರಂಗೋಲಿ) ಹಾಕುತ್ತಿದ್ದರು.

ಹಂತಗಳನ್ನು ಅನುಸರಿಸಿ.



1 
2 
3 

4 
5 




ನಾವು ಯೋಚಿಸೋಣ

1. ಮುಂದೆ ನೀಡಿರುವ ರಂಗೋಲಿಗಳನ್ನು ಗಮನಿಸಿ. ಎಲ್ಲಾ ರಂಗೋಲಿಗಳು ಸಮಮಿತೀಯವಾಗಿವೆಯೇ?



2. ಈ ರಂಗೋಲಿಗಳನ್ನು ಕಾಗದದ ಮೇಲೆ ಟ್ರೇಸ್ ಮಾಡಿ. ರಂಗೋಲಿಯ ಅರ್ಧ ಭಾಗವು ಇನ್ನೊಂದು ಅರ್ಧಭಾಗದ ಮೇಲೆ ನಿಖರವಾಗಿ ಇರುವ ರೀತಿಯಲ್ಲಿ ಟ್ರೇಸಿಂಗ್ ಪೇಪರ್‌ನ್ನು ಅರ್ಧದಷ್ಟು ಮಡಚಿ.



3. ಕೊಟ್ಟಿರುವ ರಂಗೋಲಿಗಳು ಎರಡು ತದ್ರೂಪ ಭಾಗಗಳಾಗಿ ವಿಭಜನೆಯಾಗುವಂತೆ, ರೇಖೆಗಳನ್ನು ಎಳೆಯಿರಿ.

4. ನಿಮ್ಮ ಸುತ್ತಲಿನ ಇತರೆ ಸಮಮಿತೀಯ ವಸ್ತುಗಳನ್ನು ಹುಡುಕಿ. ಚರ್ಚಿಸಿ.




ಶಿಕ್ಷಕರ ಟಿಪ್ಪಣಿ: ಕೋಲಂ, ಸಂಪ್ರದಾಯ ಮತ್ತು ಅದು ಯಾವ ರಾಜ್ಯಗಳಿಗೆ ಸೇರಿದೆ ಎಂಬುದರ ಕುರಿತು ಚರ್ಚಿಸಿ. ಪುಟ ಸಂಖ್ಯೆ 122 ರಲ್ಲಿ ನೀಡಲಾದ ಬಿಂದು(Dot) ಗ್ರಿಡ್‌ನ್ನು ನೀವು ಬಳಸಬಹುದು. ಅವರು ಅದನ್ನು ಸಮಮಿತೀಯ ರಂಗೋಲಿಗಳನ್ನು ತಯಾರಿಸಲು ಬಳಸಬಹುದು.



ನಾವು ಮಾಡೋಣ

ರಂಗೋಲಿಗಳನ್ನು ಹಾಕಿ ಆನಂದಿಸಿ

ಪೂಕಳಂ, ಕೇರಳ




ಐಪಾನ್, ಉತ್ತರಾಖಂಡ




1. ಮುಂದೆ ನೀಡಲಾದ ಸಮಮಿತೀಯ ರಂಗೋಲಿಗಳನ್ನು ಬಿಡಿಸಿ, ಪೂರ್ಣಗೊಳಿಸಿ.


a.



b.



c.




2. ಸಮಮಿತೀಯವಾಗಿರುವ ಇನ್ನೂ ಕೆಲವು ರಂಗೋಲಿಗಳನ್ನು ನಿಮ್ಮ ನೋಟ್‌ಪುಸ್ತಕದಲ್ಲಿ ಬಿಡಿಸಿ.



ಶಿಕ್ಷಕರ ಟಿಪ್ಪಣಿ: ಕೊಟ್ಟಿರುವ ರಂಗೋಲಿಯ ಅರ್ಧ ಭಾಗವನ್ನು ಪೂರ್ಣಗೊಳಿಸಲು ಹೆಚ್ಚುವರಿ ಅಭ್ಯಾಸಗಳನ್ನು ನೀಡಿ. ಮಕ್ಕಳು ರಂಗೋಲಿಯ ಇನ್ನರ್ಧ ಭಾಗವನ್ನು ಹೇಗೆ ಬಿಡಿಸುತ್ತಾರೆ ಎಂಬುದನ್ನು ಗಮನಿಸಿ ಮತ್ತು ಚರ್ಚಿಸಿ. ಇನ್ನರ್ಧವನ್ನು ಪೂರ್ಣಗೊಳಿಸುವಾಗ ಅವರು ಏನು ಗಮನಿಸುತ್ತಾರೆ? ಯಾವ ತಂತ್ರಗಳನ್ನು ಬಳಸುತ್ತಾರೆ?

ದೇಶದ ವಿವಿಧ ಭಾಗಗಳಿಂದ ರಂಗೋಲಿ ಮಾದರಿಗಳನ್ನು ಸಂಗ್ರಹಿಸಿ ತರಗತಿಯಲ್ಲಿ ಹಂಚಿಕೊಳ್ಳಲು ಮಕ್ಕಳಿಗೆ ತಿಳಿಸಿ.

ಮುಖವಾಡಗಳನ್ನು ತಯಾರಿಸಿ!



ಬೆಕ್ಕಿನ ಮುಖವಾಡವನ್ನು ತಯಾರಿಸೋಣ.

1. ಕಾಗದವನ್ನು ಮಧ್ಯ ಭಾಗದ ಉದ್ದಕ್ಕೂ ಮಡಚಿ.



2. ಒಂದು ಬದಿಯಲ್ಲಿ ಬೆಕ್ಕನ್ನು ಈ ರೀತಿ ಚಿತ್ರಿಸಿ.



3. ಕತ್ತರಿ ಬಳಸಿ ಅದನ್ನು ಕತ್ತರಿಸಿ ತೆಗೆಯಿರಿ.



4. ಈಗ ಮಡಚಿರುವುದನ್ನು ತೆರೆದು, ಕಣ್ಣು, ಮೂಗು ಇತ್ಯಾದಿಗಳನ್ನು ಚಿತ್ರಿಸಿ.



5. ಅದಕ್ಕೆ ಬಣ್ಣ ಹಚ್ಚಿ, ಹಿಂಭಾಗದಲ್ಲಿ ರಬ್ಬರ್ ಬ್ಯಾಂಡ್ ಕಟ್ಟಿ, ನಿಮ್ಮ ಮುಖವಾಡ ಸಿದ್ಧವಾಗಿದೆ.





ವಾವ್ ! ನಾನು ಮುಖವಾಡ ಧರಿಸಿ ಪ್ರತಿಯೊಬ್ಬರನ್ನೂ ಸ್ಪಷ್ಟವಾಗಿ ಕಾಣಬಲ್ಲೆ.

ಸೋನಿಯ ಮುಖವಾಡ ಸಮಮಿತೀಯವಾಗಿದೆ ಮತ್ತು ಅವಿಯ ಮುಖವಾಡ ಸಮಮಿತೀಯವಾಗಿಲ್ಲ.

ಓಹ್! ನಾನು ಒಂದು ಕಣ್ಣಿನಿಂದ ಮಾತ್ರ ಕಾಣಬಲ್ಲೆ. ಏನು ತಪ್ಪಾಗಿದೆ? ನನಗೆ ಆಶ್ಚರ್ಯವಾಗುತ್ತಿದೆ.






ಶಿಕ್ಷಕರ ಟಿಪ್ಪಣಿ: ಅವಿ ಒಂದು ಕಣ್ಣಿನಿಂದ ಮಾತ್ರ ನೋಡಲು ಸಾಧ್ಯವಾದ ಕಾರಣವನ್ನು ಮಕ್ಕಳೊಂದಿಗೆ ಚರ್ಚಿಸಿ. ಒಂದು ಅರ್ಧವು ಇನ್ನೊಂದು ಅರ್ಧದ ಮೇಲೆ ಐಕ್ಯಗೊಳ್ಳುವ ಎರಡು ನಿಖರವಾದ ಅರ್ಧಗಳಾಗಿ ವಿಂಗಡಿಸಲಾದ ವಸ್ತುಗಳು ಮಾತ್ರ ಸಮಮಿತೀಯವಾಗಿವೆ ಎಂಬುದನ್ನು ಮಕ್ಕಳು ಅರ್ಥಮಾಡಿಕೊಳ್ಳಬೇಕು.

ಮುಯ್ಯಿಗೆ ಮುಯ್ಯಿ

ಸೋನಿ ತನ್ನ ಚಿತ್ರವನ್ನು ಚಿತ್ರಕಾರನಿಂದ ಬಿಡಿಸಿಕೊಂಡಿದ್ದಾಳೆ.







ನಾವು ಆಲೋಚಿಸೋಣ

1. ಚಿತ್ರಕಾರನು ಮಾಡುತ್ತಿರುವ ತಂತ್ರವೇನು? ಇನ್ನು ಮುಂದೆ ತಂತ್ರ ಮಾಡಲು ಸಾಧ್ಯವಿರದ ವಸ್ತುಗಳನ್ನು ಚಿತ್ರಿಸಲು, ಚಿತ್ರಕಾರನಿಗೆ ವಸ್ತುಗಳನ್ನು ಹುಡುಕಿಕೊಡಿ. ಅಂತಹ ಮೂರು ವಸ್ತುಗಳನ್ನು ಇಲ್ಲಿ ಚಿತ್ರಿಸಿ.


ಕನ್ನಡಿಯ ಆಟ

ಸೋನಿ ಮತ್ತು ಅವಿ ಈ ಆಟವನ್ನು ಆಡಲು ಪ್ರಾರಂಭಿಸಿದರು. ನಾವು ಅವರೊಂದಿಗೆ ಆಡೋಣ.





ಅವಿ ಬಿಲ್ಲೆಗಳನ್ನು ಸರಿಯಾದ ಸ್ಥಳಗಳಲ್ಲಿ ಇಟ್ಟಿದ್ದಾನೆಯೇ? ಎಳೆದಿರುವ ರೇಖೆಯ ಮೇಲೆ ಕನ್ನಡಿಯನ್ನು ಇಡುವ ಮೂಲಕ ಅದನ್ನು ಪರಿಶೀಲಿಸಿ.






ಶಿಕ್ಷಕರ ಟಿಪ್ಪಣಿ: ಹೆಚ್ಚಿನ ಚಟುವಟಿಕೆಯಾಗಿ, ಮಕ್ಕಳು ಏಕಮಾನ ಘನಗಳು, ಬಿಲ್ಲೆ(Counter)ಗಳು ಮುಂತಾದ ವಿವಿಧ ಎರಡು ಬಣ್ಣದ ವಸ್ತುಗಳನ್ನು ಬಳಸಬಹುದು. ಮಕ್ಕಳು ಈ ಆಟವನ್ನು ನೆಲದ ಮೇಲೆ ಆಡಿದ ನಂತರ ಆಟದಲ್ಲಿ ನಾಲ್ಕಕ್ಕಿಂತ ಹೆಚ್ಚು ವಸ್ತುಗಳನ್ನು ಬಳಸಬಹುದು ಮತ್ತು ಅವರ ಸ್ನೇಹಿತರಿಗೆ ಸವಾಲು ಹಾಕಬಹುದು.




ನಾವು ಅನ್ವೇಷಿಸೋಣ

1 ಗುಂಪಿಗೆ ಸೇರದಿರುವುದನ್ನು ತೆಗೆದು, ಕಾರಣಗಳನ್ನು ನೀಡಿ.




2 ಮುಂದಿನ ಚಿತ್ರದಲ್ಲಿನ ಒಂದು ಬದಿಯು ಇನ್ನೊಂದು ಬದಿಯ ಕನ್ನಡಿಯ ಬಿಂಬವಾಗಿರುವಂತೆ, 4 ಬಾಕ್ಸ್‌ಗಳನ್ನು ಕೆಂಪು ಬಣ್ಣದಿಂದ 3 ಬಾಕ್ಸ್‌ಗಳನ್ನು ನೀಲಿ ಬಣ್ಣದಿಂದ ತುಂಬಿ.




ನೀವು ಇದನ್ನು ಎಷ್ಟು ರೀತಿಯಲ್ಲಿ ತುಂಬಬಹುದು? ಯೋಚಿಸಿ, ಯೋಚಿಸಿ!

3 ಇಲಿಯ ಬದಿಯನ್ನು ಬೆಕ್ಕಿನ ಬದಿಯಂತೆಯೇ ಮಾಡಿ. ಇಲಿಯ ಬದಿಯಲ್ಲಿ ನೀವು ಮೂರು ಚೆಂಡುಗಳನ್ನು ಮಾತ್ರ ಮರು ಜೋಡಿಸಬಹುದು.



4 ಯಾವ ಆಕಾರದ ಕಟೌಟ್‌ಗಳು ಕೊಟ್ಟಿರುವ ಆಕಾರದಲ್ಲಿ ಒಂದರ ಮೇಲೊಂದಿರದೆ ಮತ್ತು ಅಂತರವಿಲ್ಲದೆ ಹೊಂದಿಕೊಳ್ಳುತ್ತವೆ?






ಶಿಕ್ಷಕರ ಟಿಪ್ಪಣಿ: ಪ್ರಶ್ನೆ ಸಂಖ್ಯೆ 1 ರಲ್ಲಿ, ಪ್ರತಿಯೊಂದು ಭಾಗವು ಗುಂಪಿಗೆ ಸೇರದ ಭಾಗ ಆಗಿರಬಹುದು. ಮಕ್ಕಳು ಗಮನಿಸಿ, ತಮ್ಮ ಉತ್ತರಕ್ಕೆ ತಾರ್ಕಿಕ ಕಾರಣವನ್ನು ನೀಡಿ ಗುಂಪಿಗೆ ಸೇರದ ಭಾಗವನ್ನು ಕಂಡುಹಿಡಿಯಲಿ.

ದಾರಿಗಳಿಗೆ ಟೈಲ್ಸ್ ಹಾಕುವುದು



ನಾವು ಮಾಡೋಣ

1. ಯಾವುದೇ ಅಂತರ ಮತ್ತು ಒಂದರ ಮೇಲೊಂದಿಲ್ಲದೆ ಆಕಾರಗಳನ್ನು ತುಂಬಲು, ರಂಗೋಮೆಟ್ರಿ ಆಕಾರಗಳನ್ನು ಬಳಸಿ.







ಶಿಕ್ಷಕರ ಟಿಪ್ಪಣಿ: ಮಕ್ಕಳು ನೋಡುವ ವಿವಿಧ ಪಾದಚಾರಿ ಮಾರ್ಗಗಳ ಬಗ್ಗೆ ಅವರೊಂದಿಗೆ ಚರ್ಚಿಸಿ, ಮತ್ತು ಯಾವುದೇ ಅಂತರಗಳಿಲ್ಲದ ಮತ್ತು ಒಂದರ ಮೇಲೊಂದಿಲ್ಲದ ಟೈಲ್ಸ್‌ಗಳಿಂದ ಮಾರ್ಗಗಳನ್ನು ನಿರ್ಮಿಸಲು ಅವರನ್ನು ಪ್ರೋತ್ಸಾಹಿಸಿ.

ಟೈಲ್‌ಗಳನ್ನು ಮಾಡುವುದು, ದಾರಿಗಳನ್ನು ಸೃಜಿಸುವುದು

ವಿವಿಧ ಆಕೃತಿಗಳನ್ನು ಜೋಡಿಸಿ ಸೋನಿ ಮತ್ತು ಅವಿ ತಮ್ಮದೇ ಆದ ಟೈಲ್‌ಗಳನ್ನು ಮಾಡಲು ಆರಂಭಿಸಿದರು.



ಸೋನಿಯ ಟೈಲ್‌ಗಳು



ಅವಿಯ ಟೈಲ್‌ಗಳು


ನಾವು ಮಾಡೋಣ

1. ಯಾವುದೇ ಅಂತರ ಮತ್ತು ಒಂದರ ಮೇಲೊಂದಿಲ್ಲದೆ ಆಕಾರಗಳನ್ನು ತುಂಬಲು, ರಂಗೋಮೆಟ್ರಿ ಆಕಾರಗಳನ್ನು ಬಳಸಿ.

ಮುಕ್ತಾಯ

ಆರಂಭ

2. ಈ ಮಾರ್ಗಗಳನ್ನು ಮಾಡಲು ಪ್ರಯತ್ನಿಸಿ.






ಶಿಕ್ಷಕರ ಟಿಪ್ಪಣಿ: ಮಕ್ಕಳು ಖಾಲಿ ಹಾಳೆಯ ಮೇಲೆ ವಿವಿಧ ಪ್ರಸ್ತುತಿಗಳನ್ನು (tessellations) ರಚಿಸಬಹುದು ಮತ್ತು ಅವರ ಕೆಲಸವನ್ನು ತರಗತಿಯಲ್ಲಿ ಪ್ರದರ್ಶಿಸಬಹುದು. ಪುನರಾವರ್ತಿತ ಘಟಕದ ಬಗ್ಗೆ ಅವರೊಂದಿಗೆ ಚರ್ಚಿಸಿ.

ಜೈಂಟ್ ವ್ಹೀಲ್

ಸೋನಿ ಮತ್ತು ಅವಿ ಅವರ ಸಂಭಾಷಣೆಯನ್ನು ಓದಿ ಮತ್ತು ಮಾತನಾಡುತ್ತಿರುವ ಸ್ಥಳವನ್ನು ಗುರುತಿಸಿ.






ನಾವು ಆಡೋಣ


ನೀವು ಸೋನಿ ಮತ್ತು ಅವಿ ಜೊತೆ ಕುಳಿತಿರುವಿರಿ ಎಂದು ಊಹಿಸಿಕೊಳ್ಳಿ. ನೀವು ಒಂದು ಸ್ಥಳ ಅಥವಾ ಸ್ಟಾಲ್ ಬಗ್ಗೆ ಯೋಚಿಸಿ ಮತ್ತು ನಿಮ್ಮ ಮನಸ್ಸಿನಲ್ಲಿ ಯಾವ ಸ್ಟಾಲ್ ಇದೆ ಎಂಬುದನ್ನು ಕಂಡುಹಿಡಿಯಲು ನಿಮ್ಮ ಸ್ನೇಹಿತನಿಗೆ ಸವಾಲು ಹಾಕಿ. ಹೌದು ಅಥವಾ ಇಲ್ಲ ಎಂದು ಉತ್ತರಿಸುವ ಮೂಲಕ ನೀವು ಅವರಿಗೆ ಊಹಿಸಲು ಸಹಾಯ ಮಾಡಬಹುದು.

ಅಜ್ಜ ಮತ್ತು ಅಜ್ಜಿಗಾಗಿ ಹುಡುಕಾಟ

ಸೋನಿ ಮತ್ತು ಅವಿಯ ಅಜ್ಜ, ಅಜ್ಜಿಯರು ಕಾಣೆಯಾಗಿದ್ದರು. ಅವರು ತಮ್ಮ ಪ್ರಕಟಣೆಯನ್ನು ಕೇಳುತ್ತಾರೆ.



ಸೋನಿ ಮತ್ತು ಅವಿಯ
ಅಜ್ಜ, ಅಜ್ಜಿಯರು ವಿಶ್ರಾಂತಿ ಸ್ಥಳದಲ್ಲಿ
ಅವರಿಗಾಗಿ ಕಾಯುತ್ತಿದ್ದಾರೆ.





ಶಿಕ್ಷಕರ ಟಿಪ್ಪಣಿ: ಮಕ್ಕಳಿಗೆ ನಿರ್ದೇಶನಗಳ ಬಗ್ಗೆ ಅರಿವು ಮೂಡಿಸಲು, ಅವರೊಂದಿಗೆ ವಿವಿಧ ಆಟಗಳನ್ನು ಆಡಬಹುದು, ಅಲ್ಲಿ ಅವರು ದಿಕ್ಕಿನ ಸುಳುಹುಗಳನ್ನು ಅನುಸರಿಸಿ ವಸ್ತುವನ್ನು ಇಟ್ಟಿರುವ ಸ್ಥಳವನ್ನು ತಲುಪಬಹುದು. ಅವರು ನಿಮ್ಮ ಬಲಕ್ಕೆ 2 ಹೆಜ್ಜೆ, ಒಂದು ಹೆಜ್ಜೆ ಮುಂದಕ್ಕೆ, 5 ಹೆಜ್ಜೆ ಹಿಂದಕ್ಕೆ, ನಿಮ್ಮ ಎಡಕ್ಕೆ 3 ಹೆಜ್ಜೆ, ಮುಂತಾದ ಪದಗಳನ್ನು ಬಳಸಬಹುದು.



ನಾವು ಮಾಡೋಣ

1. ಸೋನಿ ಮತ್ತು ಅವಿಗೆ ನಕ್ಷೆಯನ್ನು ಗಮನಿಸಿ ಮುಂದಿನವುಗಳನ್ನು ಕಂಡುಹಿಡಿಯಲು ಸಹಾಯ ಮಾಡಿ:

   a.  ಈ ಚಿಹ್ನೆಯು ಯಾವ ಸ್ಥಳವನ್ನು ತೋರಿಸುತ್ತದೆ?

   .....

   b. ನಕ್ಷೆಯಲ್ಲಿ ಆಟದ ಪ್ರದೇಶವನ್ನು ತೋರಿಸುವ ಚಿತ್ರಕ್ಕೆ ವೃತ್ತ ಹಾಕಿ.

   .....

   c.  ಈ ಚಿಹ್ನೆಯು ಯಾವ ಸ್ಥಳವನ್ನು ತೋರಿಸುತ್ತದೆ?

   .....

   d. ಜಾತ್ರೆಯಲ್ಲಿ ಎಷ್ಟು ನಿರ್ಗಮನ ಮಾರ್ಗಗಳಿವೆ?

   .....

2. ಅವಿ ಮತ್ತು ಸೋನಿ ಅನುಸರಿಸುತ್ತಿರುವ ಮಾರ್ಗವನ್ನು ಅನುಸರಿಸಿ.

   a. ನೀಲಿ ಪಥದ ಮೇಲೆ ನಡೆಯಿರಿ.

   b. ಹಸಿರು ಪಥದ ಮೇಲೆ ಬಲಕ್ಕೆ ತಿರುಗಿ.

   c. ನಿಮ್ಮ ಬಲ ಭಾಗಕ್ಕೆ ಒಂದು ರೆಸ್ಟೋರೆಂಟ್‌ನ್ನು ಕಾಣುತ್ತೀರಿ. ಅಲ್ಲಿ ಕುಳಿತುಕೊಳ್ಳಬೇಡಿ.

   d. ಕೆಂಪು ಪಥದ ಕಡೆಗೆ ಎಡ ತಿರುವು ತೆಗೆದುಕೊಳ್ಳಿ.

   e. ಗೋಲ್ಡನ್ ಪಥದ ಕಡೆಗೆ ಮೊದಲ ಎಡ ತಿರುವು ತೆಗೆದುಕೊಳ್ಳಿ. ದಾರಿಯಲ್ಲಿ ಮಳಿಗೆಗಳು ಕಾಣಿಸುತ್ತವೆ.

   f. ವಿಶ್ರಾಂತಿ ಸ್ಥಳವನ್ನು ಕಂಡುಕೊಳ್ಳಲು ಮತ್ತು ಅಜ್ಜ ಅಜ್ಜಿಯನ್ನು ಭೇಟಿಯಾಗಲು ಮಳಿಗೆಗಳನ್ನು ಹಾದುಹೋಗಿ.

3. ಅಜ್ಜನಿಗೆ, ಎಟಿಎಂ ಗೆ ಹೋಗುವ ದಾರಿಯನ್ನು ಒಬ್ಬ ಅಂಕಲ್ ಕೇಳುತ್ತಾರೆ. ವಿಶ್ರಾಂತಿ ಸ್ಥಳದಿಂದ ಎಟಿಎಂ ಗೆ ಹೋಗುವ ದಾರಿಯನ್ನು ಅವರಿಗೆ ತಿಳಿಸಿ.

   .....

.....

.....


.....



ನಾವು ಮಾಡೋಣ

1. ಸೂರಜ್‌ಕುಂಡ್ ಜಾತ್ರೆಯಿಂದ ಹೊರಬರಲು ಎರಡು ಮಾರ್ಗಗಳಿವೆ. ಒಂದು ಜಟಿಲ ಎಂದು ತೋರುತ್ತದೆ ಮತ್ತು ಇನ್ನೊಂದು ನೇರವಾಗಿ ಅಲ್ಲಿಗೆ ಹೋಗುತ್ತದೆ.

   ಜಾತ್ರೆಯಿಂದ ನಿರ್ಗಮಿಸಲು ಸೋನಿ ಮತ್ತು ಅವಿಯೊಂದಿಗೆ ಜಟಿಲ ಮಾರ್ಗವನ್ನು ಅನುಸರಿಸಿ.




2. ನೀವು ಹಾದುಹೋದ ಜಟಿಲ ಮಾರ್ಗವನ್ನು ಹಂಚಿಕೊಳ್ಳಿ. ದಾರಿಯಲ್ಲಿ ನೀವು ಕಂಡ ವಸ್ತುಗಳನ್ನು ಬರೆಯಿರಿ.

.....

.....

.....


ಚುಕ್ಕೆ ಗ್ರಿಡ್‌ಗಳು




ಸಂಖ್ಯಾ ಕಾರ್ಡ್‌ಗಳು


1	2	3	4
5	6	7	8
9	10	11	12
13	14	15	16
17	18	19	20
30	40	50	60
70	80	90	100
200	300	400	500
600	700	800	900

ಭಿನ್ನರಾಶಿಗಳ ಕಾರ್ಡ್‌ಗಳು






ವರ್ಗಗಳು




ಟ್ಯಾನ್‌ಗ್ರಾಮ್




ಘನದ ಜಾಲ

ಸೂಚನೆ: ಬಿಂದುಗಳಿರುವ ರೇಖೆಗಳ ಮೂಲಕ ಕತ್ತರಿಸಿ ಮತ್ತು ದಪ್ಪ ರೇಖೆಗಳ ಮೂಲಕ ಮಡಚಿ.




ಆಯತ ಘನದ ಜಾಲ

ಸೂಚನೆ: ಬಿಂದುಗಳಿರುವ ರೇಖೆಗಳ ಮೂಲಕ ಕತ್ತರಿಸಿ ಮತ್ತು ದಪ್ಪ ರೇಖೆಗಳ ಮೂಲಕ ಮಡಚಿ.




ಸಿಲಿಂಡರ್‌ನ ಜಾಲ

ಸೂಚನೆ: ಬಿಂದುಗಳಿರುವ ರೇಖೆಗಳ ಮೂಲಕ ಕತ್ತರಿಸಿ ಮತ್ತು ದಪ್ಪ ರೇಖೆಗಳ ಮೂಲಕ ಮಡಚಿ.



ಶಂಕುವಿನ ಜಾಲ

ಸೂಚನೆ: ಬಿಂದುಗಳಿರುವ ರೇಖೆಗಳ ಮೂಲಕ ಕತ್ತರಿಸಿ ಮತ್ತು ದಪ್ಪ ರೇಖೆಗಳ ಮೂಲಕ ಮಡಚಿ.



ಡೈನಿಯ ಬ್ಲಾಕ್‌ಗಳು

ಸೂಚನೆ: ಬಿಂದುಗಳಿರುವ ರೇಖೆಗಳ ಮೂಲಕ ಕತ್ತರಿಸಿ ನೀವು ಚಟುವಟಿಕೆಗಳಿಗೆ ಅಗತ್ಯವಿರುವಂತೆ ಹೆಚ್ಚಿನ ಬ್ಲಾಕ್‌ಗಳನ್ನು ಮಾಡಬಹುದು.

